ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 41

೧೦ ಆಗಸ್ಟ್ ೧೯೫೮

★

ಪುಟ ೧೦ ಬೆಲೆ: ೧೩ ನಯೇ ಪೈಸೆ

ರಾಜ್ಯದ ಆಡಳಿತ ವ್ಯವಹಾರದಲ್ಲಿ ಕೈಹಾಕಲು ಯಾವ ಪಕ್ಷಕ್ಕೂ ಅಧಿಕಾರವಿಲ್ಲ

ಆಡಳಿತ ವರ್ಗದಲ್ಲಿ ಪಕ್ಷರಾಜಕೀಯ ತುಂಬಲು ಕಾಂಗ್ರೆಸ್ಸಿಗರ ಯತ್ನ

ಮುಖ್ಯಮಂತ್ರಿ ಇ. ಎಂ. ಎಸ್. ಸ್ಪಷ್ಟ ನುಡಿ:

"ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಮತ್ತು ಸ್ಥಳೀಯ ಕಾಂಗ್ರೆಸ್ ನಾಯಕರು ಕೇರಳದಲ್ಲಿರುವ ಸರ್ಕಾರವೇ ತನ್ನ ಆಡಳಿತ ವ್ಯವಹಾರಗಳಲ್ಲಿ ತಾನೇ ಕೊನೆಯ ಅಧಿಕಾರಿ ಅಲ್ಲ ಎಂಬ ಪ್ರಭಾವವನ್ನು ಆಡಳಿತ ವರ್ಗದ ಮೇಲೆ ಬೀರಲೆತ್ನಿಸುತ್ತಿದ್ದಾರೆ. ಪ್ರಧಾನ ಮಂತ್ರಿ ಮತ್ತು ಕಾಂಗ್ರೆಸ್ ಹೈಕಮಾಂಡ್ ಈ ಪ್ರವೃತ್ತಿಗಳನ್ನು ಸಕಾಲದಲ್ಲಿ ತಡೆಹಿಡಿಯದಿದ್ದರೆ ಆಡಳಿತ ವರ್ಗದಲ್ಲೂ ರಾಜಕೀಯವನ್ನು ತಂದು ತುಂಬುತ್ತದೆಯೆಂಬುದನ್ನು ತಿಳಿದು ಇದನ್ನು ಬಹಿರಂಗವಾಗಿ ಖಂಡಿಸಬೇಕು. ಪ್ರಧಾನ ಕಾರ್ಯದರ್ಶಿ ಸಾದಿಕ್ ಆಲಿಯವರಿಗೆ ಉಪದೇಶ ಮಾಡುವುದು ಬೇಕಾಗಿದ್ದರೆ ಇತರ ಪ್ರಾಂತಗಳಲ್ಲಿ ಕಾರುಭಾರು ನಡೆಸಿರುವ ತಮ್ಮ ಪಕ್ಷದ ಸರಕಾರಗಳಿಗೂ ಉಪದೇಶಿಸಲಿ. ಬಹಿರಂಗವಾಗಿ ಇದರ ಆಗುಹೋಗುಗಳನ್ನು ಚರ್ಚಿಸಲಿ."

ಎಂಬುದಾಗಿ ಕೇರಳದ ಮುಖ್ಯಮಂತ್ರಿ ಶ್ರೀ ಇ. ಎಂ. ಎಸ್. ನಂಬೂದಿರಿಪಾಡ್ ಅವರು ಇತ್ತೀಚೆಗೆ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಕೇರಳ ಸರಕಾರದ ವ್ಯವಹಾರಗಳ ಬಗ್ಗೆ ತಮ್ಮ ಮಿತಿಯನ್ನು ಮೀರಿ ಮಾತನಾಡಿದುದರ ಬಗ್ಗೆ ಹೇಳಿಕೆಯೊಂದನ್ನು ಕೊಡುತ್ತಾ, ಕಾಂಗ್ರೆಸ್ ನಾಯಕರನ್ನು ಎಚ್ಚರಿಸಿದ್ದಾರೆ.

ಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆಯ ಪೂರ್ಣ ಪಾಠ ಹೀಗಿದೆ:

"ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಸಾದಿಕ್ ಆಲಿಯವರು ಈ ರಾಜ್ಯದ ಕಾಂಗ್ರೆಸ್ಸಿಗರೊಂದಿಗೆ ನಮ್ಮ ಸರಕಾರವನ್ನು ಟೀಕಿಸುವುದರಲ್ಲೂ ಅವರೇ ಹೊರಿಸುವ ಆಪಾದನೆಗಳನ್ನು ಬಾರಿಬಾರಿಗೆ ತಾವು ಪುನರುಚ್ಚರಿಸುವುದರಲ್ಲೂ ಸೇರಿಕೊಂಡಿರುವುದನ್ನು ಕಂಡು ನನಗೆ ತುಂಬಾ ವಿಷಾದವೆನಿಸಿದೆ. ನಾನು ಮತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ ಧೇಬಾರ್ ಅವರುಗಳು ಪರಸ್ಪರ ಪತ್ರವ್ಯವಹಾರದಲ್ಲಿ ತೊಡಗಿರುವಾಗಲೇ ಇದನ್ನವರು ನಡೆಸಿರುವುದು ಇನ್ನೂ ಶೋಚನೀಯ. ಅಧ್ಯಕ್ಷ ಧೇಬರ್‌ರವರು ಎಲ್ಲಾ ದೃಷ್ಟಿಕೋನಗಳಿಂದಲೂ ಸಮಸ್ಯೆಯನ್ನು ಪರಿಶೀಲಿಸಿ ಸತ್ಯಸ್ಥಿತಿಯನ್ನು ತಿಳಿಯಲು ಖಾಸಗಿಯಾಗಿ ಪತ್ರವ್ಯವಹಾರಗಳನ್ನು ನನ್ನೊಂದಿಗೆ ನಡೆಸಿರುವಾಗ ಅದೇ ಕಾಂಗ್ರೆಸ್ಸಿನ ಕಾರ್ಯದರ್ಶಿ ಬಹಿರಂಗವಾಗಿ ಹೀಗೆ ಮಾಡುವುದು ಸರಿಯೇ ಎಂಬುದನ್ನು ಸಾರ್ವಜನಿಕರೇ ನಿರ್ಧರಿಸಲಿ.



ಬಹಿರಂಗ ಹಸ್ತಕ್ಷೇಪ

"ಕೇರಳದ ಕಾಂಗ್ರೆಸ್ಸಿಗರು ಮಾಡಿದ ಆಪಾದನೆಗಳನ್ನೆಲ್ಲ ಪುನರುಚ್ಚರಿಸಿರುವ ಸಾದಿಕ್ ಆಲಿಯವರ ದೀರ್ಘ ಹೇಳಿಕೆಯನ್ನೆಲ್ಲ ಪರಿಶೀಲಿಸುವುದು ನನಗೆ ಬೇಕಾಗಿಲ್ಲ. ಅಖಿಲ ಭಾರತ ಕಾಂಗ್ರೆಸ್ಸು ಮತ್ತು ಕೇಂದ್ರ ಸರಕಾರ ಇವೆರಡೂ, ಇಡೀ ದೇಶವನ್ನೇ ಆಳುತ್ತಿರುವ ಪಕ್ಷದ ಪ್ರಧಾನ ಕಾರ್ಯದರ್ಶಿಯು ಬೇರೆ ಪಕ್ಷವೊಂದು ಅಧಿಕಾರದಲ್ಲಿರುವ ರಾಜ್ಯದ ಆಡಳಿತದ ವಿಷಯಗಳನ್ನು ಸಾರ್ವಜನಿಕವಾಗಿ ಟೀಕಿಸುವದಾಗಲಿ, ಮಾತನಾಡುವದಾಗಲಿ ಸರಿಯೆ ಎಂಬುದನ್ನು ಯೋಚಿಸಲಿ. ಆರ್. ಡಿ. ಓ. ಒಬ್ಬರ ವರ್ಗಾವಣೆ ಮತ್ತು ಸಬ್ ಇನ್ಸ್‌ಪೆಕ್ಟರರೊಬ್ಬರ ಸಸ್ಪೆನ್ಷನ್‌ಗಳಿಗೆ ಸಂಬಂಧಿಸಿಯೇ ನಾನು ಹೀಗೆ ಹೇಳುತ್ತಿರುವುದು. ರಾಜ್ಯ ಸರ್ಕಾರ ಆಡಳಿತ ವ್ಯವಹಾರಗಳಲ್ಲಿ ಕೈಕೊಳ್ಳುವ ಇಂಥ ಕ್ರಮಗಳನ್ನು ಸಾರ್ವಜನಿಕವಾಗಿ ಪ್ರಸ್ತಾಪಿಸುವದೆಂದರೆ ಯಾವದೇ ಅಧಿಕಾರಿಯು, ತನ್ನ ಸರ್ಕಾರದ ಕ್ರಮಗಳಿಂದ ಅಸಮಾಧಾನಗೊಂಡರೆ ಸ್ಥಳೀಯ ಕಾಂಗ್ರೆಸ್ಸಿಗರ ಅಥವಾ ಅಖಿಲ ಭಾರತ ಕಾಂಗ್ರೆಸ್ಸಿನ ಸಹಾಯದಿಂದ ಈ ರಾಜ್ಯ ಸರ್ಕಾರದ ವಿರುದ್ಧ ತನ್ನ ಅಭೀಷ್ಟವನ್ನು ಪೂರೈಸಿಕೊಳ್ಳಬಹುದೇ? ಇದು ಅಖಿಲ ಭಾರತವನ್ನಾಳುವ ಪಕ್ಷವು ತಾನು ವಿರೋಧ ಪಕ್ಷವಾಗಿರುವ ರಾಜ್ಯದ ವ್ಯವಹಾರಗಳಲ್ಲಿ ನಡೆಸುವ ಬಹಿರಂಗ ಹಸ್ತಕ್ಷೇಪ ಎಂಬುದು ಸ್ಪಷ್ಟವಾಗಿದೆ.

(ಕೊನೇ ಪುಟ ನೋಡಿ)

ವಿಭಜಿತ ಕಾರ್ಮಿಕವರ್ಗ ರಾಷ್ಟ್ರದ ಪ್ರಶ್ನೆ ಬಗೆಹರಿಸಲಾರದು

ಎ. ಐ. ಟಿ. ಯು. ಸಿ. ಕಾರ್ಯದರ್ಶಿ ಡಾ॥ ರಾಜಬಹದೂರ್ ಗೌರ್ ಭಾಷಣ

"ಟ್ರೇಡ್ ಯೂನಿಯನ್ ಐಕ್ಯತೆಯ ಪ್ರಶ್ನೆ ಇಂದು ರಾಷ್ಟ್ರೀಯ ಪ್ರಶ್ನೆಯಾಗಿದೆ. ವಿಭಜಿತ ಕಾರ್ಮಿಕ ವರ್ಗವಿದ್ದಲ್ಲಿ ರಾಷ್ಟ್ರದ ಪ್ರಶ್ನೆ ಬಗೆಹರಿಯದು. ಆದ್ದರಿಂದಾಗಿ ಎಲ್ಲ ಭಿನ್ನಾಭಿಪ್ರಾಯಗಳನ್ನೂ ಬದಿಗಿರಿಸಿ ಕಾರ್ಮಿಕ ವರ್ಗದ ಐಕ್ಯತೆ ಸಾಧಿಸುವುದು ಅಗತ್ಯ" ಎಂದು ಡಾ॥ ರಾಜಬಹದೂರ್ ಗೌರ್‌ರವರು ಭಾನುವಾರ (ಆಗಸ್ಟ್ ೩)ದಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಟ್ರೇಡ್‌ಯೂನಿಯನ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡುತ್ತ ತಿಳಿಸಿದರು.

ಎರಡು ದಿನಗಳ ಕಾಲ ನಡೆದ ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ವಿಸ್ತೃತ ಸಭೆಯ ಅಂಗವಾಗಿ ಈ ಸಭೆಯನ್ನು ಏರ್ಪಡಿಸಲಾಗಿದ್ದಿತು. ಬೆಂಗಳೂರಿನ ನಾನಾ ಸಂಘಗಳ ಅಧಿಕಾರವರ್ಗದವರು ಮತ್ತು ಕಾರ್ಯಕರ್ತರೂ ಸಭೆಗೆ ಆಗಮಿಸಿದ್ದರು. ಕೆ. ಪಿ. ಟಿ. ಯು. ಸಿ. ಉಪಾಧ್ಯಕ್ಷರಾದ ಶ್ರೀ ಎಸ್. ಸೂರ್ಯನಾರಾಯಣರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಖಜಾಂಚಿ ಶ್ರೀ ಎಂ. ಎಸ್. ಕೃಷ್ಣನ್‌ರವರು ಡಾ॥ ರಾಜಬಹದ್ದೂರ್ ಗೌರ್‌ರವರನ್ನು ಪರಿಚಯ ಮಾಡಿಕೊಟ್ಟು ಎಲ್ಲರನ್ನೂ ಸ್ವಾಗತಿಸಿದರು.

"ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಟ್ರೇಡ್ ಯೂನಿಯನ್ ಐಕ್ಯತೆ" ಎಂಬ ವಿಷಯ ಕುರಿತು ಡಾ॥ ರಾಜಬಹದ್ದೂರ್ ಗೌರ್‌ರವರು ಮಾಡಿದ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿದೆ.

ಭಾಷಣದ ಸಾರಾಂಶ

ಆರಂಭದಲ್ಲಿ ಅವರು ಟ್ರೇಡ್ ಯೂನಿಯನ್ ಚಳವಳಿಯ ಇತಿಹಾಸದ ಬಗ್ಗೆ ಮಾತನಾಡಿದರು. ಇಪ್ಪತ್ತನೆಯ ಶತಮಾನವು ದುಡಿಯುವ ವರ್ಗದ ಯುಗವಾಗಿದೆ. ಇತಿಹಾಸದಲ್ಲಿ ಅದು ಸುವರ್ಣಾಕ್ಷರದಲ್ಲಿ ಲಿಖಿತವಾಗುತ್ತದೆ, ಎಂದು ತಿಳಿಸಿದರು.

1920ರಲ್ಲಿ ಮಹಾತ್ಮ ಗಾಂಧಿಯವರು ಪ್ರಪಂಚವು ಬಂಡವಾಳಶಾಹಿಯಿಲ್ಲದೆ ನಡೆಯಬಹುದು ಆದರೆ ಕಾರ್ಮಿಕರಿಲ್ಲದೆ ಸಾಧ್ಯವಿಲ್ಲ ಎಂದು ಹೇಳಿದ್ದರು. 1917ರಲ್ಲಿ ರಷ್ಯದಲ್ಲಿ ಬಂಡವಾಳಶಾಹಿ ಮತ್ತು ಭೂಮಾಲಿಕರ ವರ್ಗ ಉರುಳಿಸಲ್ಪಟ್ಟು ಕಾರ್ಮಿಕವರ್ಗ ಅಧಿಕಾರಕ್ಕೆ ಬಂದಿತ್ತು. ಇಂದು ಅನೇಕ ರಾಷ್ಟ್ರಗಳಲ್ಲಿ ಕಾರ್ಮಿಕವರ್ಗ ಅಧಿಕಾರದಲ್ಲಿದೆ.

ಔದ್ಯೋಗಿಕ ಕ್ರಾಂತಿಯ ನಂತರ ಬಂಡವಾಳಶಾಹಿ ವರ್ಗದೊಂದಿಗೆ ಕಾರ್ಮಿಕ ವರ್ಗವೂ ಉದ್ಭವಿಸಿತು. ಸಮಾಜವಾದದ ಭಾವನೆಯೂ ಅಂದಿನಿಂದಲೇ ಆರಂಭವಾಯಿತು.

ಬಂಡವಾಳಶಾಹಿ ಸಮಾಜದಲ್ಲಿ ಉತ್ಪಾದನಾ ಸಾಮಗ್ರಿಗಳು ಖಾಸಗಿ ಒಡೆತನದಲ್ಲಿದ್ದು, ಶೋಷಣೆ ಮತ್ತು ಲಾಭವೇ ಪ್ರಧಾನವಾದ್ದಾಗಿರುತ್ತದೆ.

ಸಮಾಜವಾದದಲ್ಲಿ ಶೋಷಣೆ ಸಂಪೂರ್ಣವಾಗಿ ನಿರ್ಮೂಲಗೊಂಡು, ಉತ್ಪಾ

(ಕೊನೇ ಪುಟ ನೋಡಿ)

ಲಕ್ನೋ ವಿದ್ಯಾರ್ಥಿಗಳ ಮೇಲೆ ಗೋಲಿಬಾರು

ಆಧುನಿಕ ವೈದ್ಯಕೀಯ ವಿದ್ಯಾರ್ಥಿಗಳಿಗೆ ದೊರಕುತ್ತಿರುವ ಸೌಲಭ್ಯಗಳು ತಮಗೂ ದೊರಕಬೇಕೆಂದು ಹೋರಾಡುತ್ತಿರುವ ಲಕ್ನೋದ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಿಗೆ ಬೆಂಬಲ ನೀಡಲು ವಿದ್ಯಾರ್ಥಿಗಳ ಪ್ರದರ್ಶನದ ಮೇಲೆ ಪೋಲೀಸರು ಗೋಲಿಬಾರು ಮಾಡಿರುವುದು ಖಂಡನೀಯವಾದುದಾಗಿದೆ. ಒಬ್ಬ ವಿದ್ಯಾರ್ಥಿ ಮರಣ ಹೊಂದಿ ಐವರಿಗೆ ಗಾಯವಾಗಿದೆಯೆಂದು ವರದಿಯಾಗಿದೆ. ಆಗಸ್ಟ್ 2ರಂದು ವಿದ್ಯಾರ್ಥಿಗಳು ತಮ್ಮ ಬೆಂಬಲವನ್ನು ಹೋರಾಡುತ್ತಿರುವ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಿಗೆ ಸೂಚಿಸಲು ಸಂಪೂರ್ಣವಾಗಿ ಮುಷ್ಕರ ನಡೆಸಿ, ಮೆರವಣಿಗೆಯಲ್ಲಿ ಬರುತ್ತಿದ್ದಾಗ ಮೇಲಿನ ಘಟನೆ ನಡೆದಿರುವುದು ವಿಷಾದಕರವಾಗಿದೆ. ಉತ್ತರ ಪ್ರದೇಶ ಸರಕಾರ ಕೂಡಲೇ ಈ ಬಗ್ಗೆ ವಿಚಾರಣೆ ನಡೆಸಬೇಕೆಂದು ಒತ್ತಾಯ ಬಂದಿದೆ. ಆದರೆ ಸರಕಾರ ಈವರೆಗೆ ಅದರ ಬಗ್ಗೆ ಏನೂ ಹೇಳಿಲ್ಲ.

ಕಳೆದ ಹನ್ನೊಂದು ದಿನಗಳಿಂದ ಉಪವಾಸ ಮುಷ್ಕರ ನಡೆಸುತ್ತಿರುವ ವಿದ್ಯಾರ್ಥಿ ಶ್ರೀ ಗಾರ್ಗರವರ ಸ್ಥಿತಿ ಚಿಂತಾಜನಕವಾಗಿದೆಯೆಂದು ತಿಳಿದುಬಂದಿದೆ.

ಲಕ್ನೋದಲ್ಲಿ ವಿದ್ಯಾರ್ಥಿಗಳು ಸರಕಾರದ ದಬ್ಬಾಳಿಕೆ ವಿರೋಧಿಸಲು ಮಾರನೆಯ ದಿನ ಪ್ರತಿಭಟನಾ ಮುಷ್ಕರ ನಡೆಸಿದ್ದಾರೆ. ನಗರದಲ್ಲಿ 15 ದಿನಗಳ ಕಾಲ 144 ನೇ ಸೆಕ್ಷನ್ ವಿಧಿಸಲಾಗಿದೆ. ಹದಿನೈದು ದಿನಗಳ ಕಾಲ ಎಲ್ಲ ಶಾಲೆಗಳನ್ನೂ ಮುಚ್ಚಲಾಗಿದೆ. ಅನೇಕ ವಿದ್ಯಾರ್ಥಿಗಳ ಬಂಧನವಾಗಿದೆ.

ಸರಕಾರ ಕೂಡಲೇ ಈ ಗೋಲೀಬಾರು ಘಟನೆಯ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ನಡೆಸಬೇಕೆಂದು ಒತ್ತಾಯ ಪಡಿಸುತ್ತೇವೆ. ಪತ್ರಿಕೆ ಅಚ್ಚಿಗೆ ಹೋಗುವ ಹೊತ್ತಿಗೆ ವಿದ್ಯಾರ್ಥಿಗಳು ಹೋರಾಟವನ್ನು ಹಿಂತೆಗೆದುಕೊಂಡಿದ್ದಾರೆ.

ಪಶ್ಚಿಮ ಬಂಗಾಳ ಕಾಂಗ್ರೆಸ್ ಬಿಕ್ಕಟ್ಟು

ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಅತುಲ್ಯಘೋಷ್‌ರವರು ಬಿಕ್ಕಟ್ಟಿನ ಪರಿಣಾಮವಾಗಿ ರಾಜೀನಾಮೆ ಕೊಡುವರೆಂದು ತಿಳಿದುಬಂದಿದೆ. ಪಂಡಿತ ನೆಹರೂರವರು ಜುಲೈ 27ರಂದು ಕಲ್ಕತ್ತೆಗೆ ಭೇಟಿ ಕೊಟ್ಟಾಗ ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರ ಘೋಷ್‌ರವರನ್ನು ರಾಜೀನಾಮೆಗೆ ಒಪ್ಪಿಸಿದರೆಂದು ತಿಳಿದುಬಂದಿದೆ.

ಪಶ್ಚಿಮ ಬಂಗಾಳ ಕಾಂಗ್ರೆಸ್ಸಿನಲ್ಲಿ ಬಿಕ್ಕಟ್ಟು ಕೆಲ ತಿಂಗಳಿಂದಲೂ ತೀವ್ರವಾಗಿದೆ. ಕಳೆದ ಹತ್ತು ವರ್ಷಗಳಿಂದಲೂ ಅಧ್ಯಕ್ಷಪಟ್ಟದಲ್ಲಿರುವ ಅತುಲ್ಯ ಘೋಷ್‌ರವರ ಮೇಲೆ ಅನೇಕ ಗಂಭೀರವಾದ ಆರೋಪಗಳಿವೆ. ದೊಡ್ಡ ದೊಡ್ಡ ಮಾರವಾಡಿಗಳ ಗುಂಪಿನೊಂದಿಗೆ ಸೇರಿಕೊಂಡು ಘೋಷ್‌ರವರು ಕಾಂಗ್ರೆಸ್ ಸಂಸ್ಥೆಯ ಅವರ ಅಧಿಕಾರವನ್ನು ಸ್ಥಾಪಿಸಿದ್ದಾರೆಂದು ಹೇಳಲಾಗಿದೆ. ಇವರೊಂದಿಗೆ ರಾಜ್ಯದ ಆಹಾರ ಸಚಿವ ಪಿ. ಸಿ. ಸೇನ್‌ರವರೂ ಕೂಡಿ ಕೊಂಡಿದ್ದಾರೆ.

ಮಾಜಿ ನ್ಯಾಯಾಂಗ ಸಚಿವ (ರಾಯ್ ಮಂತ್ರಿಮಂಡಲಕ್ಕೆ ರಾಜೀನಾಮೆ ಇತ್ತ) ಸಿದ್ಧಾರ್ಥರೇಯವರು ಮಾಡಿದ ಆರೋಪಗಳ ಹಿನ್ನೆಲೆಯಲ್ಲಿ ಅತುಲ್ಯಘೋಷ್‌ರವರ ರಾಜೀನಾಮೆ ಪ್ರಸ್ತಾಪ ಬಂದಿದೆ. ರೇಯವರು ಘೋಷ್‌ರವರ ಮೇಲೂ ಹಾಗೂ ಪಿ. ಸಿ. ಸೇನ್‌ರವರ ಮೇಲೆ ಗಂಭೀರವಾದ ಆರೋಪಗಳನ್ನು ಮಾಡಿದ್ದಾರೆಂಬುದನ್ನು ನೆನಪಿಗೆ ತೆಗೆದುಕೊಳ್ಳಬೇಕಿದೆ.

ಈ ತಿಂಗಳ ಕೊನೆಯವಾರದಲ್ಲಿ ಸಿದ್ಧಾರ್ಥ ರೇಯವರು ಮಂತ್ರಿ ಪದವಿಯನ್ನು, ಕಾಂಗ್ರೆಸ್ ಶಾಸನ ಸಭಾಸದಸ್ಯತ್ವವನ್ನು ತ್ಯಜಿಸಿದುದರಿಂದಾಗಿ ಕಲ್ಕತ್ತ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದೆ. ಸಿದ್ಧಾರ್ಥ ರೇಯವರು ಪುನಃ ಚುನಾವಣೆಗೆ ನಿಂತಿದ್ದಾರೆ. ಕಾಂಗ್ರೆಸ್ಸಿಗೂ ಇವರಿಗೂ ನೇರವಾದ ಸ್ಪರ್ಧೆ ನಡೆದಿದೆ. ಈ ಚುನಾವಣೆಯಲ್ಲಿ ರೇಯವರ ವಿಜಯ ಅವರು ಮಂತ್ರಿ ಮಂಡಲದ ಹಾಗೂ ಕಾಂಗ್ರೆಸ್ ಸಂಸ್ಥೆಯ ಮೇಲೆ ಮಾಡಿರುವ ಆರೋಪಗಳಿಗೆ ರುಜುವಾತು ಇತ್ತಂತಾಗುತ್ತದೆ. ಹೇಗಾದರೂ ಮಾಡಿ ಗೆಲ್ಲಲು ಕಾಂಗ್ರೆಸ್ ಯತ್ನಿಸುತ್ತಿದೆಯೆಂದು ತಿಳಿದುಬಂದಿದೆ.

ಆದ್ದರಿಂದಾಗಿಯೇ ಸಾಧ್ಯವಾದಷ್ಟು ಮಟ್ಟಿಗೆ ಸಂಸ್ಥೆಯಲ್ಲಿನ ಬಿಕ್ಕಟ್ಟನ್ನು ತೇಪೆ ಹಾಕಲು ಪ್ರಯತ್ನ ನಡೆಯುತ್ತಿದೆ.

ನಮ್ಮ ಆರ್ಥಿಕ ಪರಿಸ್ಥಿತಿ ಬಗ್ಗೆ ರಿಜರ್ವ್ ಬ್ಯಾಂಕ್ ಅವಲೋಕನೆ

1957-58 ವರ್ಷಾವಧಿಯಲ್ಲಿ ಭಾರತದ ಆರ್ಥಿಕಸ್ಥಿತಿಯ ಬಗ್ಗೆ ಕುರಿತು ಹೇಳುತ್ತ ಈ ವರ್ಷದಲ್ಲಿ ವಿದೇಶೀ ಮೂಲಧನದಲ್ಲಿ ಇನ್ನಷ್ಟು ಹೆಚ್ಚು ಇಳುವರಿಯಾಗಿದೆ, ಕೈಗಾರಿಕೋತ್ಪನ್ನ ಹೆಚ್ಚಿದೆ ಮತ್ತು ವ್ಯವಸಾಯ ಉತ್ಪನ್ನವು ನಿರುತ್ಸಾಹದಾಯಕವಾದ ರೀತಿಯಲ್ಲಿ ಕಡಿಮೆಯಾಗಿದೆ ಎಂದು ರಿಜರ್ವ ಬ್ಯಾಂಕ್ ವರದಿ ತಿಳಿಸುತ್ತದೆ.

ವಿದೇಶೀ ಮೂಲಧನದಲ್ಲಿ ಇಳುವರಿಯು ಈ ವರ್ಷದಲ್ಲಿ 260 ಕೋಟಿ ರೂಗಳಾಗಿವೆ. 1956-57 ರಲ್ಲಿ 221 ಕೋಟಿ ರೂ. ಆಗಿತ್ತು. ಪದಾರ್ಥಗಳ ಒಟ್ಟು ವ್ಯಾಪಾರದ ಸೂಚ್ಯಂಕವು ಶೇಕಡ ಒಂದರಷ್ಟು ಹೆಚ್ಚಿದೆ.

ಹತ್ತಿ ಗಿರಣಿ ಮತ್ತು ಸೆಣಬು ಕೈಗಾರಿಕೆಯಲ್ಲಿ ಉತ್ಪಾದನೆ ಕಡಿಮೆಯಾಗಿದೆ.

ಆಹಾರ ಪರಿಸ್ಥಿತಿಯು ಈ ವರ್ಷದಲ್ಲಿ ಇನ್ನಷ್ಟು ಹದಗೆಟ್ಟಿದೆ. 1956–57ಕ್ಕಿಂತ 1957–58ರಲ್ಲಿ ಉತ್ಪಾದನೆಯ ಅಂದಾಜು ಕೆಳಮಟ್ಟದಲ್ಲಿದೆ ಎಂದು ವರದಿಯು ತಿಳಿಸುತ್ತದೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಒಟ್ಟು ಖೋತಾ ಬಜೆಟ್ ರೂ. 500 ಕೋಟಿ ರೂಗಳಾಗಿದೆ. ಇದು 1956–57ರ ಎರಡರಷ್ಟಾಗಿದೆ.

ವಿದೇಶೀ ವಿನಿಮಯ ನಾಣ್ಯದಲ್ಲಿ ಈ ವರ್ಷದಲ್ಲಿ ಇಳುವರಿ ಹೆಚ್ಚಾಗಿದ್ದು, ಈಚಿಗಿನ ವರ್ಷಗಳಲ್ಲಿ ಅತ್ಯಧಿಕವಾಗಿದೆ.

ಕರೆನ್ಸಿ ಚಲಾವಣೆಯು 1953—54ರಿಂದ ಏಕ ತರವಾಗಿ ಹೆಚ್ಚುತ್ತಿದೆ 1953-54ರಿಂದ ಈ ವರ್ಷದವರೆಗೆ 441 ಕೋಟಿ ರೂಗಳಷ್ಟು ಚಲಾವಣೆ ಹೆಚ್ಚಿದೆ. 1957—58ರ ವರ್ಷದಲ್ಲಿ ಚಲಾವಣೆಯಲ್ಲಿರುವ ಒಟ್ಟು ನೋಟುಗಳ ಮೌಲ್ಯ 1536 ಕೋಟಿ ರೂಗಳಾಗಿವೆ ಎಂದು ತಿಳಿಸುತ್ತದೆ.

ವಾರದ ವಾರ್ತಾ ಸಮೀಕ್ಷೆ

ನಮ್ಮ ಆರ್ಥಿಕದ ಮೇಲೆ ಬಿದ್ದಿರುವ ಈ ಅಪಾರವಾದ ಹೊರೆಯನ್ನು ವರದಿಯು ಯೋಜನೆಯ ಕಾರ್ಯವು ತೀವ್ರ ಗತಿಯಿಂದ ಸಾಗುತ್ತಿರುವುದರಿಂದಾಗಿ ಎಂದು ಹೇಳುತ್ತದೆ ಅಷ್ಟೆ. ಅದರ ವಿವರವನ್ನು ಅಥವಾ ಕಾರಣವನ್ನು ಕೊಡುವುದಿಲ್ಲ. ಯೋಜನೆಯ ಮೂರನೆಯ ವರ್ಷದಲ್ಲಿ ತಲೆದೋರಿರುವ ಬಿಕ್ಕಟ್ಟು ಈಗ ಸಾಮಾನ್ಯವಾಗಿ ಎಲ್ಲರಿಗೂ ಗೋಚರವಾಗಿದೆ. ರಿಜರ್ವ್ ಬ್ಯಾಂಕಿನ ಪರಿಶೀಲನೆಯನ್ನು ಅವಲೋಕಿಸಿದಲ್ಲಿ ಪರಿಸ್ಥಿತಿಯ ಗಂಭೀರತೆ ಅರಿವಾಗುತ್ತದೆ.

ಲೆಬನಾನ್ ರಾಷ್ಟ್ರಾಧ್ಯಕ್ಷರ ಚುನಾವಣೆ

ಕಳೆದ ಗುರುವಾರ (ಜುಲೈ 31)ದಂದು ಲೆಬನಾನ್ ರಾಷ್ಟ್ರಾಧ್ಯಕ್ಷರಾಗಿ ಜನರಲ್ ಫಾವುದ್ ಷೆಹಾಬ್‌ರವರು ಆಯ್ಕೆಯಾಗಿದ್ದಾರೆ. ಹನ್ನೆರಡು ವಾರಗಳ ಹಿಂದೆ ಅಧ್ಯಕ್ಷ ಚೌಮೂನ್‌ರವರ ವಿರೋಧವಾಗಿ ಸಶಸ್ತ್ರ ಹೋರಾಟ ಆಂಭವಾಗಿತ್ತು. ಸಶಸ್ತ್ರ ಹೋರಾಟ ನಡೆಸುತ್ತಿರುವ ವಿರೋಧಿಗಳು ಸಹ ಜನರಲ್ ಫಾವುದ್‌ರವರಿಗೆ ಬೆಂಬಲ ನೀಡಿದ್ದಾರೆಂದು ತಿಳಿದುಬಂದಿದೆ.

ಅಧ್ಯಕ್ಷರ ಆಯ್ಕೆ ನಡೆದಿದ್ದು ಅಮೇರಿಕನ್ ಪಡೆಗಳು ಲೆಬನಾನ್‌ನಲ್ಲಿ ಇರುವಾಗ. ಅಲ್ಲದೆ ಅವರ ಆಯ್ಕೆಯಲ್ಲಿ ಅಧ್ಯಕ್ಷ ಐಸನ್ ಹೋವರ್‌ರವರ ಪ್ರತಿನಿಧಿ ರಾಬರ್ಟ್ ಮರ್ಫಿ ಪ್ರಮುಖ ಪಾತ್ರ ವಹಿಸಿದ್ದಾರೆಂದೂ ಹೇಳಬಹುದು. ನೇರವಾಗಿ ಅಮೇರಿಕದ ಕೈವಾಡದಿಂದ ಆಯ್ಕೆಯಾಗಿರುವ ಸೇನಾಪಡೆಯ ದಂಡನಾಯಕರಾದ ಫಾವುದ್‌ರವರು ಅನುಸರಿಸುವ ನೀತಿಯನ್ನು ಕಾದುನೋಡಬೇಕಿದೆ. ಒಟ್ಟಿನಲ್ಲಿ ಹಲವು ವಾರಗಳಿಂದ ಬಿಕ್ಕಟ್ಟಿನಲ್ಲಿದ್ದ ಅಧ್ಯಕ್ಷರ ಆಯ್ಕೆಯ ಪ್ರಶ್ನೆಯು ಸದ್ಯಕ್ಕೆ ಮುಕ್ತಾಯವಾದಂತಾಗಿದೆ.

ಲೆಬನಾನ್ ಸರಕಾರವು ಹೇಳಿದ ಕೂಡಲೇ ಅಮೇರಿಕನ್ ಸೇನಾಪಡೆಗಳು ಅಲ್ಲಿಂದ ಕಾಲ್ತೆಗೆಯುವುದೆಂದು ಈವರೆಗೆ ಅಮೇರಿಕ ಸರಕಾರ ಹೇಳುತ್ತಿತ್ತು. ಅಧ್ಯಕ್ಷ ಜನರಲ್ ಫಾವುದ್‌ರವರು ತಮ್ಮ ಮೊದಲ ಭಾಷಣದಲ್ಲಿಯೇ ವಿದೇಶೀ ಸೇನೆಗಳು ಲೆಬನಾನ್‌ನಿಂದ ಕಾಲ್ತೆಗೆಯಬೇಕೆಂದು ತಿಳಿಸಿದ್ದಾರೆ. ಆದರೆ ಅಮೇರಿಕ ಸರಕಾರ ಮೀನಮೇಷ ಎಣಿಸುತ್ತಿದೆ.

ಅಧ್ಯಕ್ಷ ಐಸನ್ ಹೋವರರ ವಿಶೇಷ ಪ್ರತಿನಿಧಿ ರಾಬರ್ಟ್ ಮರ್ಫಿಯವರು ಮಾತನಾಡುತ್ತ ಅಮೇರಿಕ ಸೇನೆಗಳು ಲೆಬನಾನಿನಿಂದ ಯಾವಾಗ ಹಿಂತಿರುಗುವುದೆಂದು ಹೇಳುವುದು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಸಾಕಷ್ಟು ಭದ್ರತೆ ಏರ್ಪಡುವವರೆಗೆ ಸೇನೆಗಳ ವಾಪಸಾತಿ ಪ್ರಶ್ನೆ ಏಳುವುದಿಲ್ಲವೆಂದೂ ತಿಳಿಸಿದ್ದಾರೆ. ಅಂದ ಮೇಲೆ ಅಮೇರಿಕನ್ ಆಕ್ರಮಣಕಾರರ 'ಸದುದ್ದೇಶ' ಈಗ ಇನ್ನಷ್ಟು ಚೆನ್ನಾಗಿ ವ್ಯಕ್ತಗೊಳ್ಳುತ್ತದೆ.

ಕೃಶ್ಚೇವ್ — ಮಾವೋ ಭೇಟಿ

ಸೋವಿಯತ್ ಪ್ರಧಾನಿ ನಿಕಿಟ ಕೃಶ್ಚೇವ್ ಮತ್ತು ಜನತಾ ಚೀಣದ ಅಧ್ಯಕ್ಷ ಮಾವೋತ್ಸೆತುಂಗ್ ಪೀಕಿಂಗ್‌ನಲ್ಲಿ ಕಳೆದ ಗುರುವಾರ ಜುಲೈ 31ರಂದು ಭೇಟಿ ಮಾಡಿ ಅಂತರರಾಷ್ಟ್ರೀಯ ಮತ್ತಿತರ ವಿಚಾರಗಳ ಕುರಿತು ಮಾತುಕತೆಯನಂತರದಲ್ಲಿ ಹೊರಡಿಸಲಾದ ಜಂಟಿ ಪ್ರಕಟಣೆಯಲ್ಲಿ ಎರಡೂ ರಾಷ್ಟ್ರಗಳ ಏಕಾಭಿಪ್ರಾಯವನ್ನು ವ್ಯಕ್ತಗೊಳಿಸಲಾಗಿದೆ ಪಂಚಶೀಲ ತತ್ವಗಳ ಬಗ್ಗೆ ತಮ್ಮ ದೃಢ ನಂಬಿಕೆಯನ್ನು ವ್ಯಕ್ತಗೊಳಿಸಲಾಗಿದೆ.

ಪ್ರಕಟಣೆಯಲ್ಲಿ ಭಾರತ, ಇಂಡೋನೇಶಿಯ, ಸಂಯುಕ್ತ ಅರಬ್ ಗಣತಂತ್ರ ಮತ್ತಿತ್ತರ ರಾಷ್ಟ್ರಗಳೂ, ಏಷ್ಯ, ಆಫ್ರಿಕ, ಯೂರೋಪು ಮತ್ತು ಅಮೇರಿಕದ ಜನತೆಯೂ ಶಾಂತಿ ಮತ್ತು ಸಹಬಾಳ್ವೆಯನ್ನು ಎತ್ತಿ ಹಿಡಿಯಲು ವಹಿಸಿರುವ ಗುರುತರ ಪಾತ್ರವನ್ನು ಪ್ರಶಂಸಿಸಲಾಗಿದೆ. ಶಾಂತಿ ಹೋರಾಟವು ಎಂದಿಗಿಂತ ಬಲಯುತವಾಗಿರುವುದನ್ನು ಗಮನಿಸಲಾಗಿದೆ.

ಪಶ್ಚಿಮ ಏಷ್ಯದಲ್ಲಿ ಉದ್ಭವಿಸಿರುವ ವಿಶೇಷ ಪರಿಸ್ಥಿತಿಯನ್ನು ಪರಿಶೀಲಿಸಿ, ಲೆಬನಾನ್ ಮತ್ತು ಜೋರ್ಡಾನುಗಳಿಂದ ಅಮೇರಿಕ ಮತ್ತು ಬ್ರಿಟಿಷ್ ಕೂಡಲೇ ಕಾಲ್ತೆಗೆಯಬೇಕೆಂದೂ, ಶೀಘ್ರವಾಗಿ ಶೃಂಗ ಸಮ್ಮೇಳನ ನಡೆಯಬೇಕೆಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಯುಗೋಸ್ಲಾವಿಯದ ಪರಿಷ್ಕರಣವಾದವನ್ನು ಕುರಿತು ಪ್ರಕಟಣೆಯಲ್ಲಿ ಕಮ್ಯೂನಿಸ್ಟ್ ಚಳವಳಿಯಲ್ಲಿ ವಿಪತ್ಕಾರಿಯಾದುದಾಗಿದೆ. ಇದರ ವಿರುದ್ಧವಾಗಿ ನಿರ್ಣಾಯಕವಾದ ಹೋರಾಟ ಮುಂದುವರಿಸಬೇಕೆಂದು ತಿಳಿಸಲಾಗಿದೆ.

ಸೋವಿಯತ್ ಯೂನಿಯನ್ ಮತ್ತು ಜನತಾ ಚೀಣದ ಸರಕಾರ ಹಾಗೂ ಜನತೆಯ ನಡುವೆ ಇರುವ ದೃಢವಾದ ವಿಶ್ವಾಸ ಹಾಗೂ ಸೌಹಾರ್ದತೆಯನ್ನು ಪ್ರಕಟಣೆಯಲ್ಲಿ ವ್ಯಕ್ತಗೊಳಿಸಲಾಗಿದೆ.

ಮಧ್ಯಪ್ರಾಚ್ಯದ ಬಿಕ್ಕಟ್ಟಿನ ಪರಿಸ್ಥಿತಿ

(೯ನೇ ಪುಟ ನೋಡಿ)

ಹತಾಶರಾದ ಪ್ರತಿಪಕ್ಷಗಳವರು ಕೇರಳ ಸರ್ಕಾರವನ್ನುರುಳಿಸಲು ಹಿಡಿದಿರುವ ದಾರಿ ಹಿಂಸೆ-ಪುಂಡತನಗಳಾಗಿವೆ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕೇರಳ ಪ್ರಾಂತ ಸಮಿತಿಯ ಸಭೆಯು ಜುಲೈ ತಾ. 25ರಂದು ನಡೆದು, ಕೇರಳದ ಇಂದಿನ ಗಂಭೀರವಾದ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಿ ಈ ಕೆಳಗಿನ ಪ್ರಕಟನೆಯನ್ನು ಹೊರಡಿಸಿದೆ:

ವಿಷಾದಕರ ಘಟನೆ

ಕ್ವಿಲನ್‌ನ ಸಮೀಪ ಒಂದು ಗೋಡಂಬಿ ಕಾರ್ಖಾನೆಯ ಮುಂದುಗಡೆ ಗೋಳಿಬಾರು ನಡೆಸಲು ಪೋಲೀಸಿನವರು ನಿರ್ಬಂಧಿತರಾದರೆಂದೂ, ಅದರಿಂದ ಇಬ್ಬರು ಮರಣ ಹೊಂದಿದ್ದಲ್ಲದೆ ಆರು ಮಂದಿಗೆ ಗಾಯಗಳಾದುವೆಂದೂ ಪ್ರಾಂತ ಸಮಿತಿಯ ಸಭೆ ನಡೆಯುತ್ತಿದ್ದಾಗ ವರ್ತಮಾನ ತಲುಪಿತು.

ಪಾರ್ಟಿಯ ನಾಯಕತ್ವದಲ್ಲಿ ನಡೆಯುವ ಸರ್ಕಾರದ ಕೈಕೆಳಗೆ, ಪೋಲೀಸರು ಗೋಳಿಬಾರು ಮಾಡುವ ಅಗತ್ಯ ಉಂಟಾದಂಥ ಮಟ್ಟಕ್ಕೆ ಪರಿಸ್ಥಿತಿ ಗಂಭೀರವಾದುದಕ್ಕೆ ಪಾರ್ಟಿಯು ಅಗಾಧವಾದ ವಿಷಾದ ವ್ಯಕ್ತಪಡಿಸುತ್ತದೆ.

ಇದೊಂದು ಏಕಾಏಕಿ ಘಟನೆಯಲ್ಲವೆಂದು ತಿಳಿಸಲು ಪಾರ್ಟಿ ಬಯಸುತ್ತದೆ. ಇದು ಸ್ಥಾಪಿತ ಹಕ್ಕುದಾರರು, ಕೆಲವು ಪ್ರತಿಪಕ್ಷದ ನಾಯಕರು ಮತ್ತು ಇತರ ಕಮ್ಯೂನಿಸ್ಟ್ ವಿರೋಧೀ ಪ್ರತಿಗಾಮೀಶಕ್ತಿಗಳು ಒಂದು ವಿಭಾಗದ ವಿದ್ಯಾರ್ಥಿಗಳ ಸಹಾಯದಿಂದ ಕಾರ್ಮಿಕರ ಹೆಸರಿನಲ್ಲೂ ಇತರ ರೀತಿಗಳಲ್ಲೂ ರಾಜ್ಯದೊಳಗೆ ಅಶಾಂತಿಯನ್ನೂ ಅರಾಜಕತೆಯನ್ನೂ ಸೃಷ್ಟಿಸುವ ದುರುದ್ದೇಶದಿಂದ ಬೇಕು ಬೇಕೆಂದೇ ಯೋಜನಾಬದ್ಧವಾಗಿ ನಡೆಸುತ್ತಿರುವ ಅತ್ಯಂತ ಉದ್ರೇಕಕಾರಿ ಹಾಗು ಹಿಂಸಾತ್ಮಕ ಚಟುವಟಿಕೆಗಳ ಪರಿಣಾಮವಾಗಿದೆ. ಇಂಥ ಚಟುವಟಿಕೆಗಳ ಪರಿಣಾಮವಾಗಿಯೇ ವರಂದರಪಳ್ಳಿಯಲ್ಲಿ 5 ಮಂದಿ ಮರಣ ಹೊಂದಿರುವುದು. ಇಂಥ ಪರಿಸ್ಥಿತಿ ಮುಂದರಿಯಬಾರದು.

ಪಾರ್ಟಿಯ ನಾಯಕತ್ವದಲ್ಲಿ ಸರಕಾರ ರಚಿಸಲ್ಪಟ್ಟ ನಂತರ ವಿಪುಲವಾದ ನಾಗರಿಕ ಸ್ವಾತಂತ್ರ್ಯಗಳನ್ನು ನೀಡಲಾಗಿತ್ತು. ಆದರೆ ಅದನ್ನು ದುರುಪಯೋಗ ಮಾಡಿಕೊಂಡು, ಕಾಯಿದೆಭಂಗ ಉಂಟುಮಾಡಲು ಯೋಜನೆಗಳೂ ಎಡೆಬಿಡದ ಪ್ರಯತ್ನಗಳೂ ನಡೆದಿವೆ; ಘರ್ಷಣೆಗಳನ್ನು ಉದ್ರೇಕಗೊಳಿಸುವುದಕ್ಕೂ ಅಶಾಂತಿ ಉಂಟುಮಾಡುವುದಕ್ಕೂ, ಹಾಗೆ ಘಟನಾತ್ಮಕವಾದ ಸರಕಾರ ಅಸಾಧ್ಯವಾಗುವಂತೆ ಮಾಡುವುದಕ್ಕೂ ತುಂಬ ಪರಿಶ್ರಮ ನಡೆದಿದೆ. ಪಾರ್ಟಿಯು ಇಂಥ ಚಟುವಟಿಕೆಗಳನ್ನು ಗಂಭೀರವಾಗಿ ಪರಿಗಣಿಸುತ್ತದೆ. ಇಂಥ ಪರಿಸ್ಥಿತಿಯನ್ನು ಸೃಷ್ಟಿಸುವುದರ ವಿರುದ್ಧ ಕಮ್ಯೂನಿಸ್ಟರು ಮಾತ್ರವಲ್ಲ, ಕಮ್ಯೂನಿಸ್ಟೇತರ ಪಕ್ಷಗಳೂ ಹೆಚ್ಚು ಹೆಚ್ಚು ಕಾತರತೆಯನ್ನು ವ್ಯಕ್ತಪಡಿಸಲು ಆರಂಭಿಸಿವೆ. ಅಲ್ಲದೆ ಇಂಥ ಕೃತ್ಯಗಳ ವಿರುದ್ಧ ಪ್ರತಿಭಟಿಸಲು ತೊಡಗಿವೆ ಎಂದು ಪಾರ್ಟಿಯು ತಿಳಿದಿದೆ.

ಕಾಂಗ್ರೆಸಿನ ತಂತ್ರಗಳು

ಆದರೆ ಇತ್ತೀಚೆಗೆ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರುಗಳ ಜಂಟಿ ಸಭೆಯೊಂದು ಎರ್ನಾಕುಲಂದಲ್ಲಿ ನಡೆದು, ಅದರಲ್ಲಿ ಅಶಾಂತಿಯನ್ನು ಕಡಿಮೆ ಮಾಡುವುದರ ಬದಲು ಹೆಚ್ಚೇ ಮಾಡಲು ಸಹಾಯಕವಾಗುವಂಥ ನಿರ್ಣಯವನ್ನು ಮಾಡಲಾಗಿದೆಯೆಂದು ತಿಳಿದು ಪಾರ್ಟಿ ವಿಷಾದಪಡುತ್ತದೆ. ಅವರು ಅಪ್ರಾಮಾಣಿಕವಾಗಿ ಎಲ್ಲ ವಾಸ್ತವಿಕ ಸಂಗತಿಗಳನ್ನೂ ತಿರುವುಮುರುವು ಮಾಡಿ, ಪಾರ್ಟಿಯ ಚಟುವಟಿಕೆಗಳ ಮತ್ತು ಸರಕಾರದ ಕ್ರಮಗಳ ಬಗೆಗೆ ಪಾರ್ಟಿಯನ್ನೂ ಸರಕಾರವನ್ನು ಅಪಾದನೆಗೆ ಗುರಿಪಡಿಸಿದ್ದಾರೆ. ಅವರ ಮುಂದಿನ ಕಾರ್ಯಕ್ರಮವನ್ನು ನಿರ್ಣಯಿಸಲು ಒಂದು ಕ್ರಿಯಾ ಸಮಿತಿಯನ್ನು ರಚಿಸಿದ್ದಾರೆ, ಅಲ್ಲದೆ ಕಾಂಗ್ರೆಸಿನ ಘಟನೆಯನ್ನು ಕೂಡ ಅಮಾನತು ಪಡಿಸಲು ತೀರ್ಮಾನಿಸಿದ್ದಾರೆ. ಇದು ಕಾಂಗ್ರೆಸ್ ಮುಂದಾಳುಗಳ ಸಭೆಯ ಪರಿಣಾಮ.

ಬದಲಾಗಿ ಇನ್ನೂ ಹೆಚ್ಚು ಮಾಡುವಂತೆ ಪ್ರೇರೇಪಿಸುತ್ತದೆ.

ಈ ಪ್ರಚೋದನಾ ಕೃತ್ಯಗಳ ಬಗೆಗೆ ಪಿ ಎಸ್. ಪಿ. ಮತ್ತಿತರ ಪ್ರತಿಪಕ್ಷಗಳೂ ಅದೇ ತರದ ಧೋರಣೆಯನ್ನು ವಹಿಸುತ್ತಿವೆ.

ಕೆಥೋಲಿಕ್ ಆಡಳಿತೆಯಲ್ಲಿರುವ ವಿದ್ಯಾ ಸಂಸ್ಥೆಗಳು ಈ ವಿದ್ಯಾರ್ಥಿಗಳ ಹೋರಾಟದ ಮುಂಭಾಗದಲ್ಲಿವೆ ಎಂಬುದನ್ನು ಗಮನಿಸಬೇಕು. ತಿರುವನಂತಪುರದ ಮೋರಿ ಇವಾನಿಯೋ ಕಾಲೇಜು, ಎರ್ನಾಕುಲಂದ ಸ್ಟೆಂಟ್ ಅಲ್‌ಬರ್ಟ್ ಮತ್ತು ತೇವಾರಾ ಕಾಲೇಜುಗಳು, ತ್ರಿಶೂರಿನ ಸ್ಟೆಂಟ್ ಥಾಮಸ್ ಕಾಲೇಜು, ಕೋಝಿಕೋಡಿನ ದೇವಗಿರಿ ಕಾಲೇಜು, ಮುಂತಾದವುಗಳಲ್ಲಿ ಮ್ಯಾನೇಜುಮೆಂಟುಗಳೂ ಬಲಪಕ್ಷದ ಪ್ರತಿಗಾಮಿಗಳ ಒಂದು ವಿಭಾಗವೂ ಮೊದಲಿನಿಂದ ವಿದ್ಯಾರ್ಥಿಗಳನ್ನು ಗಲಭೆಗೆ ಪ್ರೇರಿಪಿಸುತ್ತಿದ್ದುವು. ಈ ಸಂಸ್ಥೆಗಳಲ್ಲಿ ಹಿಂದೆ ಯಾವುದೇ ವಿದ್ಯಾರ್ಥಿ ಚಳುವಳಿಗೂ ಸ್ವಾತಂತ್ರ್ಯ ಕೊಡದಿದ್ದ ಮ್ಯಾನೇಜುಮೆಂಟುಗಳೇ ಈಗ ವಿದ್ಯಾರ್ಥಿಗಳನ್ನು ಗಲಭೆಗೆ ಪ್ರಚೋದಿಸುತ್ತಿವೆ.

ಕೇರಳ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಹೇಳಿಕೆ

ದೋಣಿಗಳನ್ನು ತಡೆಗಟ್ಟಿ ಪ್ರಯಾಣಿಕರಿಗೆ ಆತಂಕ ಮಾಡುವುದು ಮತ್ತು ದೋಣಿಗಳನ್ನು ಹಾಕುವುದು, ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನು ಹಾಳು ಮಾಡುವುದು, ಕಾಯಿದೆ ಮತ್ತು ಕ್ರಮ ರಕ್ಷಣೆಯ ಕರ್ತವ್ಯ ನಿರ್ವಹಿಸುವ ಪೋಲೀಸು ಅಧಿಕಾರಿಗಳ ಮೇಲೆ ಹಲ್ಲೆ ನಡೆಸುವುದು, ಸರಕಾರೀ ಕಛೇರಿಗಳ ಒಳಗೆ ಬಲತ್ಕಾರವಾಗಿ ನುಗ್ಗಿ ಕೆಲಸಕ್ಕೆ ತೊಂದರೆ ಮಾಡುವುದು, ವಿದ್ಯಾಭ್ಯಾಸ ಮಾಡಲು ಅಪೇಕ್ಷಿಸುವ ವಿದ್ಯಾರ್ಥಿಗಳನ್ನೂ ಅಧ್ಯಾಪಕರನ್ನೂ ಬೆದರಿಸುವುದು ಮತ್ತು ಕ್ಲಾಸುಗಳಿಂದ ಹೊರಗೆ ಎಳೆದು ಹಾಕುವುದು, ಕಮ್ಯೂನಿಸ್ಟ್ ಪಾರ್ಟಿ ಕಛೇರಿಗಳ ಮೇಲೆ ಧಾಳಿ ಮಾಡುವುದು ಮತ್ತು ಪಾರ್ಟಿಯ ಕಾರ್ಯಕರ್ತರನ್ನು ಹೊಡೆಯುವುದು ಇತ್ಯಾದಿ ಅನರ್ಥಕಾರೀ ಹೋರಾಟದ ಕ್ರಮಗಳ ವಿರುದ್ಧ ಕಾಂಗ್ರೆಸ್ ನಾಯಕರು ನಿರ್ಣಯದಲ್ಲಿ ಒಂದೇ ಒಂದು ಮಾತು ಕೂಡ ಹೇಳಿರುವುದಿಲ್ಲ. ಪ್ರಜಾಪ್ರಭುತ್ವದ ಎಲ್ಲ ಕ್ರಮಗಳಿಗೂ ವಿರೋಧವಾಗಿ ನಡೆಸಲ್ಪಡುವ ಈ ಹೋರಾಟದಲ್ಲಿ ಕೆಲವು ಕೆ. ಪಿ. ಸಿ. ಸಿ. ಸದಸ್ಯರೂ ಎಂ. ಎಲ್. ಎ. ಗಳೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ಕಾಂಗ್ರೆಸ್ ನಾಯಕರ ನಿರ್ಣಯವು, ಅವರ ಅನುಯಾಯಿಗಳ ಮತ್ತು ವಿದ್ಯಾರ್ಥಿಗಳ ಈ ರೀತಿಯ ವರ್ತನೆಗಳನ್ನು ಖಂಡಿಸುವುದರ ಬದಲಾಗಿ, ಅವುಗಳಿಗೆ ಪ್ರೋತ್ಸಾಹ ನೀಡುತ್ತದೆ. ಇಂಥ ಕೃತ್ಯಗಳನ್ನು ಮಾಡದಂತೆ ಅವರನ್ನು ತಡೆಯುವುದರ

ಸ್ಥಾಯೀ ಹಿತಗಳಿಗೆ ಶರಣಾಗತಿ

ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ರಚನೆಯಾದ ನಂತರ ಪ್ರದೇಶ ಕಾಂಗ್ರೆಸಿನ ನಾಯಕತ್ವವು ವಿದ್ಯಾ ಮಸೂದೆಯ ವಿರುದ್ಧ ಚಳುವಳಿ ಮುಂತಾದ ಸಂದರ್ಭಗಳಲ್ಲಿ ಕೆಥೋಲಿಕ್ ಚರ್ಚ್‌ನ ಒತ್ತಡಕ್ಕೆ ಶರಣು ಹೋಗಿದೆ. ಈವತ್ತೂ ಈ ಪಕ್ಷಗಳೂ ಅದೇ ರೀತಿ ಶರಣಾಗತಿ ಹೊಂದಿವೆಯೆಂದು ಕೇರಳದ ಜನತೆ ತಿಳಿದುಕೊಂಡಿದೆ ಎಂದು ಕಮ್ಯೂನಿಸ್ಟ್ ಪಾರ್ಟಿಗೆ ನಂಬಿಕೆಯಿದೆ.

ವಿದ್ಯಾರ್ಥಿಗಳ ಮತ್ತು ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಕಮ್ಯೂನಿಸ್ಟ್ ಸರಕಾರವು ಒಪ್ಪದೆ, ನೌಕರಶಾಹೀ ರೀತಿಯಲ್ಲಿ ಸದೆಬಡಿಯುವುದೇ ಈಗಿನ ಚಳುವಳಿಗೆ ಕಾರಣವೆಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ನಿರ್ಣಯದಲ್ಲಿ ಹೇಳಲಾಗಿದೆ. ಈ ವಾದವು ಸಂಪೂರ್ಣ ನಿರಾಧಾರವಾದುದೆಂದು ಕಮ್ಯೂನಿಸ್ಟ್ ಪಾರ್ಟಿಗೆ ಪೂರ್ತಿ ಮನವರಿಕೆಯಾಗಿದೆ. ಪಾರ್ಟಿಯ ನೇತೃತ್ವದಲ್ಲಿರುವ ಸರಕಾರವು ಅತ್ಯಧಿಕ ಸವಲತ್ತುಗಳನ್ನು ಕೊಟ್ಟು ಸಾಧ್ಯವಿರುವುದನ್ನೆಲ್ಲ ಮಾಡಿದೆಯೆಂದು ಪಾರ್ಟಿ ತಿಳಿದಿದೆ.

ಖಾಸಗಿ ದೋಣಿ ಮಾಲೀಕರು ವಿದ್ಯಾರ್ಥಿಗಳಿಗೆ ಕೊಟ್ಟಿದ್ದ ರಿಯಾಯತಿಯನ್ನು ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ವಾಟರ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಶನ್ ರದ್ದುಮಾಡಿದೆ ಎಂಬ ನೆಪದಿಂದ ಆಲೆಪ್ಪಿ ಮತ್ತು ಪರಿಸರದ ವಿದ್ಯಾರ್ಥಿಗಳ ಚಳುವಳಿ ಆರಂಭವಾಯಿತು. ಪಳ್ಳಿಕ್ಕೂಡ್ಡು ಶಾಲೆಗೆ ಸಂಬಂಧವಿರುವ ಕೆಲವು ದೋಣಿ ಮಾಲಿಕರು ಆ ಶಾಲೆಗೆ ಹೋಗುವ ವಿದ್ಯಾರ್ಥಿಗಳಿಂದ ಮಾತ್ರ, ಅವರು ಎಷ್ಟು ದೂರ ಪ್ರಯಾಣ ಮಾಡಿದರೂ, ಒಂದಾಣೆ ದರ ತೆಗೆದುಕೊಳ್ಳುತ್ತಿದ್ದರು ಎಂಬುದು ನಿಜ. ಆದರೆ ಒಂದು ಸಾರ್ವಜನಿಕ ಸಂಸ್ಥೆಯು ಹಾಗೆ ಒಂದು ವಿಭಾಗದವರಿಗೆ ಮಾತ್ರ ಒಂದು ಪ್ರತ್ಯೇಕ ಸವಲತ್ತನ್ನು ಕೊಡಲು ಸಾಧ್ಯವಿಲ್ಲ. ಅದರ ಬದಲಾಗಿ, ಕಾರ್ಪೊರೇಶನಿನ ದೋಣಿಗಳಲ್ಲಿ ಪ್ರಯಾಣ ಮಾಡುವ ಎಲ್ಲ ವಿದ್ಯಾರ್ಥಿಗಳೂ ಸಾಧಾರಣ ದರದ ಅರ್ಧಾಂಶ ಮಾತ್ರ ಕೊಟ್ಟರೆ ಸಾಕೆಂದು ಕಾರ್ಪೊರೇಷನು ತೀರ್ಮಾನಮಾಡಿತು. ಅತೀ ಕಡಿಮೆ ದರವು ಎರಡಾಣೆಯಾದುದರಿಂದ, ಹತ್ತಿರದ ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳೆಲ್ಲ ಒಂದೇ ಆಣೆ ದರ ಕೊಟ್ಟರೆ ಸಾಕಾಗುತ್ತದೆ. ಖಾಸಗಿ ಮಾಲಿಕರು ಯಾವ ಕಾಲದಲ್ಲೂ ಎಲ್ಲ ವಿದ್ಯಾರ್ಥಿಗಳಿಗೂ ಇಷ್ಟೊಂದು ಸವಲತ್ತನ್ನು ಕೊಟ್ಟದ್ದಿಲ್ಲ.

ಒಪ್ಪಂದಕ್ಕೆ ತಯಾರು

ಸರಕಾರವು, ತ್ರಿಶೂರಿನ ಸೀತಾರಾಂ ಗಿರಣಿ ಚಳುವಳಿಯನ್ನು ಮಾತುಕತೆಗಳಿಂದ ಬಗೆಹರಿಸಲು ಅತ್ಯಂತ ಪ್ರಯತ್ನ ಮಾಡಿದೆ. ಈಗ ವಿವಾದವು ಕಡ್ಡಾಯವಾದ ಮಧ್ಯಸ್ಥಿಕೆ (ಎಡ್ಜುಡಿಕೇಶನ್)ಗೆ ಒಪ್ಪಿಸಲ್ಪಟ್ಟಿದೆಯಾದರೂ ಸರಕಾರವು ಈಗಲೂ ಸಂಧಾನದಿಂದ ವಿವಾದವನ್ನು ಪರಿಹರಿಸಲು ಪ್ರಯತ್ನ ಮಾಡುತ್ತಿದೆ. (ಈ ವಿವಾದವೀಗ ಮಾತುಕತೆಯಿಂದ ತೀರ್ಮಾನವಾಗಿದೆ. ಸರಕಾರ ಮೊದಲೇ ಸೂಚಿಸಿದ್ದ ಪರಿಹಾರವನ್ನು ಕಾರ್ಮಿಕ ಸಂಘದ ನಾಯಕರು ಈಗ ಒಪ್ಪಿಗೊಂಡಿದ್ದಾರೆ.)

ಇಂಥ ಚಳುವಳಿಗಳ ವಿಚಾರದಲ್ಲಿ ಸರಕಾರವು ಅತ್ಯಂತ ತಾಳ್ಮೆಯಿಂದ ವರ್ತಿಸುತ್ತಿದೆ. ಯಾಕೆಂದರೆ ಸರಕಾರವು ನಾಗರಿಕ ಸ್ವಾತಂತ್ರ್ಯಕ್ಕೆ ಬಹಳ ಮನ್ನಣೆ ಕೊಡುತ್ತದೆ. ಆದರೆ ಹಿಂಸಾತ್ಮಕ ಕೃತ್ಯಗಳು ಮಿತಿಮೀರಿದಾಗ ಆಲೆಪ್ಪಿಯಲ್ಲಿ ಸೆ. 144 ಜ್ಯಾರಿಗೊಳಿಸಬೇಕಾಯಿತು. ಪರಿಸ್ಥಿತಿಯು ಶಾಂತವಾದ ಕೂಡಲೆ ಆ ಆಜ್ಞೆಯನ್ನು ಹಿಂತೆಗೆದುಕೊಳ್ಳಲಾಗಿದೆ.

ಸರಕಾರವು ಇಷ್ಟೊಂದು ಒಪ್ಪಂದ ಮನೋಭಾವ ತಾಳಿದ್ದರೂ ಕೂಡ, ಚಳುವಳಿಯು ಮುಂದರಿದುದಲ್ಲದೆ ಹೆಚ್ಚು ಹೆಚ್ಚು ಹಿಂಸಾತ್ಮಕ ರೂಪವನ್ನು ತಾಳಿತು. ಕಾಂಗ್ರೆಸ್, ಪಿ. ಎಸ್. ಪಿ. ಮತ್ತು ಆರ್. ಎಸ್. ಪಿ. ನಾಯಕರು ಅದಕ್ಕೆ ಸಂಘಟಿತ ಸ್ವರೂಪ ಕೊಡಲು ಬಹಿರಂಗವಾಗಿ ಮುಂದೆ ಬಂದರು. ವಿದ್ಯಾರ್ಥಿಗಳ ಅಥವ ಕಾರ್ಮಿಕರ ಕೆಲವು ಕೇಳಿಕೆಗಳನ್ನು ಪಡೆಯುವುದಕ್ಕಿಂತಲೂ ನಿಶ್ಚಿತವಾದ ರಾಜಕೀಯ ಉದ್ದೇಶವನ್ನು ಸಾಧಿಸಿಕೊಳ್ಳುವ ಹಂಬಲವೇ ಈ ಹೋರಾಟಗಳ ಹಿಂದೆ ಅಡಗಿತ್ತೆಂಬುದು ಸ್ಪಷ್ಟವಿದೆ.

ಕೇರಳದ ಪ್ರತಿಪಕ್ಷಗಳು, ದೇವಿಕುಳಂ ಚುನಾವಣೆಯ ಮೂಲಕ ಕೊಡಲಾಗಿರು

(೬ನೇ ಪುಟ ನೋಡಿ)

ನೀವೇನು ಹೇಳುತ್ತೀರಿ ?

ನಮ್ಮ 'ಚೌಚೌವಾಲಾ' ಇದೇ ಸಂಚಿಕೆಯಲ್ಲೊಲ್ಲೋ ಅರಬ್ ರಾಷ್ಟ್ರಗಳಲ್ಲಿ ನಡೆದ ದುರಾಕ್ರಮಣದ ಬಗ್ಗೆ ಹಿಂದೂಮಹಾಸಭೆಯವರ ವಿಚಾರವಾಗಿ ಕುರುಕಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಇನ್ನೊಂದು ಬಗೆಯ ಸುದ್ದಿ ಇಲ್ಲಿದೆ. (ಈ ಸುದ್ದಿ ಐ. ಪಿ.ಎ. ಖಾಸಾ ವರದಿಗಾರರ ಸುದ್ದಿ)

ಹಂಗೇರಿಯ ದ್ರೋಹಿ ಇಮ್ರೆನಾಜ್ ಹತ್ಯೆಯ ಬಗ್ಗೆ ಭಾರತದಲ್ಲೊಂದು ಚಳವಳವೇ ನಡೆಯಿತು. ಅದನ್ನು ನಡೆಸಿದವರು ಒಂದೇ ಹಾಸಿಗೆಯಲ್ಲಿ ಒಟ್ಟಿಗೆ ವ್ಯೆಯಾನಿಸಿದ ವಿಚಿತ್ರ ಮಹನೀಯರುಗಳು ಅಂದರೆ—ಜನಸಂಘ, ಹಿಂದೂಮಹಾಸಭೆ, ಪಿ. ಎಸ್. ಪಿ., ಮತ್ತು ಸ್ವಾತಂತ್ರ್ಯ—ಸಂಸ್ಥೆಗಳಿಗಾಗಿರುವ ಕಾಂಗ್ರೆಸ್ ಇವರುಗಳು. ಇವರುಗಳ ಚಳವಳದ ಹಾಸಿಗೆಗೆ ಧನಸನಸಹಾಯ ನೀಡಿದವರು ಯೂಸಿಸ್! ಅಮೇರಿಕೆಯ ವಾರ್ತಾಶಾಖೆ!

ಈ ಪ್ರಚಾರದ ರಹಸ್ಯ ಇದೀಗ ಬಯಲಾಗಿದೆ. ಇದಕ್ಕಾಗಿ ಅಂದಾಜು ಎಲ್ಲಿ ನಡೆಯಿತೆಂದರೆ ದೆಹಲಿಯ ಒಬ್ಬ ಪ್ರಮುಖ ಜನಸಂಘದ ನಾಯಕರ ಮನೆಯಲ್ಲಿ, ಜೂನ್ 30ರಂದು ಕೊನೆಯ ಅಂದಾಜು ಅಂದರೆ ರೂ. 75,000ಗಳ ಅಂದಾಜು ಬಂದಿತು. ಆಹೊತ್ತು ಈ ಪ್ರಚಾರ ಕಾರ್ಯನಿರ್ವಾಹಕರೆಲ್ಲ ಅಲ್ಲಿ ಸೇರಿದ್ದರು!

ಆದರೆ ಇಷ್ಟು ಚೆನ್ನಾಗಿ ಯೋಚಿಸಲ್ಪಟ್ಟಿದ್ದ ನೀಟಾದ ಯೋಜನೆ ಇರಾಕ್ ಘಟನೆಯಿಂದಾಗಿ ಮುರಿದು ಕುಪ್ಪಳಿಸಿಹೋಯಿತು!

○ ○ ○

ಕೇರಳದಲ್ಲಿ ಖೋಟಾ ಮತದಾನವಾದುದು ನಿಜ !

ದೇವಿಕುಲಂ ಉಪಚುನಾವಣೆಯಲ್ಲಿ ಕಮ್ಯೂನಿಸ್ಟರು ಖೋಟಾ ಸಂಖ್ಯೆಯಿಂದ ಮತದಾರರ ಸಂಖ್ಯೆಯನ್ನು ಹೆಚ್ಚಿಸಿ ಅಧಿಕ ಬಹುಮತಗಳನ್ನು ಗಳಿಸಿ ವಿಜಯಿಗಳಾದರೆಂದು ಕಾಂಗ್ರೆಸ್ ನಾಯಕರೆಲ್ಲ ಗೋಳಿಟ್ಟರು. ಕೇರಳ ಸರ್ಕಾರದ ವಿರುದ್ಧ ನಡೆದಿರುವ ವಿಪರೀತ ಅಪಪ್ರಚಾರದಿಂದ ಪ್ರಭಾವಿತರಾಗಿರುವವನಿಗೆ ಇದರಲ್ಲಿ ಹುರುಳಿಲ್ಲದಿರಲಿಕ್ಕಿಲ್ಲ ಎನಿಸಿರಲೂ ಸಾಕು.

ಆದರೆ ಕೇರಳ ಕಾಂಗ್ರೆಸ್ ನಾಯಕರ ಈ ಆಪಾದನೆ ವಸ್ತುಸ್ಥಿತಿಯನ್ನು ಆಧರಿಸಿದುದಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಖೋಟಾ ಓಟುದಾನ ನಡೆದಿರುವುದೂ ನಿಜ.

ಅದಕ್ಕಾಗಿ ಎರಡೇ ಸಂಗತಿಗಳನ್ನು ಇಲ್ಲಿ ಕೊಡಲಾಗಿದೆ: ಮತದಾರರ ಪಟ್ಟಿಯಲ್ಲಿಯ ನಿಜಾಂಶವನ್ನು ಕೆಳಗೆ ಕೊಡಲಾಗಿದೆ:

ಚಿರಕ್ಕಾಡವು (5ನೇ ವಾರ್ಡ್)

1194—5·51 **ಜೋಸೆಫ್ (ಥಾಮಸ್) ಪುಲ್ಲೋಲಿಲ್.**

1195—5·51 **ಜಾನ್ (ಥಾಮಸ್) ಪುಲ್ಲೋಲಿಲ್.**

ವಳೂರ್ (7ನೆಯ ವಾರ್ಡ್)

1027—16·43 **ಪಿ. ಟಿ. ಜೊಸೆಫ್ (ಥಾಮಸ್) ತೋಡುಮುಪ್ಪರಯಿಲ್.**

1024—17·4' **ಜಾನ್ (ಥಾಮಸ್) ಬಾಬು ಭವನ.**

ಎರಡು ವಾರ್ಡ್‌ಗಳಿಂದ ಎರಡು ಸಲ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಿಕೊಂಡಿರುವ ಈ ಮಹಾನುಭಾವರಾರು? ಕಮ್ಯೂನಿಸ್ಟರೆ? ಅಲ್ಲ, ಹಾಗಾದರೆ ಕಮ್ಯೂನಿಸ್ಟರಿಗೆ ಸಹಾಯ ನೀಡುವ ಸಹವರ್ತಿಗಳೆ? ಅವರೂ ಅಲ್ಲ.

ಹಾಗಾದರೆ ಯಾರಿವರು ?

ಅವರಾರೂ ಅಲ್ಲ, ಕೇರಳ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿರುವ, ಕೇರಳ ಸರಕಾರದ ಮೇಲೆ ಖೋಟಾ ಮತದಾರರ ಆರೋಪವನ್ನು ಹೊರಿಸುವಲ್ಲಿ ಅಗ್ರೇಸರರಾಗಿರುವ ಪಿ. ಟಿ. ಚಾಕೋ, ಎಂ.ಎಲ್.ಎ. ಅವರ ಇಬ್ಬರು ಸೋದರರು !

ಸ್ವತಃ ಚಾಕೋರವರೇ ಎರಡು ಕಡೆಗೆ ತಮ್ಮ ಹೆಸರನ್ನು ಸೇರಿಸಲೆತ್ನಿಸಿದ ವಿಷಯ ಅಧಿಕಾರಿಗಳಿಗೆ ಚೆನ್ನಾಗಿ ಗೊತ್ತಿದೆ. 'ಇನ್ನೊಂದೆಲ್ಲಿ? ಅದರ ವಿವರ ಕೊಡಿ' ಎಂದು ಅಧಿಕಾರಿಗಳು ಚಾಕ್ಕೋರವರನ್ನು ಕೇಳಿದಾಗ ವಿವರಗಳನ್ನು ಕೊಡದೆ ಅವರು ಮತದಾನದ ಹಕ್ಕನ್ನು ಎರಡೂ ಕಡೆಗೂ ಕಳೆದುಕೊಂಡು ಕಮ್ಯೂನಿಸ್ಟರು ತಮ್ಮ ಮತದಾನದ ಹಕ್ಕನ್ನು ಕಿತ್ತುಕೊಂಡರೆಂದು ಆರೋಪಿಸಿದರು!

ಕಮ್ಯೂನಿಸ್ಟರ ಆಳ್ವಿಕೆಯಲ್ಲಿ ಪ್ರಜಾಪ್ರಭುತ್ವವೆಂದರೆ ಪ್ರತಿಯೊಬ್ಬ ಕಾಂಗ್ರೆಸ್ಸಿಗನಿಗೂ ಎರಡು ಮತಗಳು ಎಂದು ಕಾಂಗ್ರೆಸ್ಸಿನವರು ಭಾವಿಸಿದಂತಿದೆ ಅಲ್ಲವೇ ?

ಮತದಾರರ ಪಟ್ಟಿಯ ತನಿಖೆಗಾಗಿ ಕೇರಳ ಕಾಂಗ್ರೆಸ್ಸು ಸಮಿತಿಯೊಂದನ್ನು ನಿಯಮಿಸಿದೆ. ಈ ತನಿಖೆ ಕಾಂಗ್ರೆಸ್ ನಾಯಕರ ಮನೆಯಿಂದಲೇ ನಡೆಯಲಿ, ಹಾಗಾದರೆ, ಅಲ್ಲವೆ?

○ ○ ○

ಗೋರವಾಲಾರವರ ವರದಿಯಿಂದ ಕೆಳಗಿನ ಅಂಶಗಳನ್ನು ಎತ್ತಿಕೊಡಲಾಗಿದೆ.

● ಹಳೇ ಮೈಸೂರಿನ ಸಂಪ್ರದಾಯಕ್ಕನುಗುಣವಾಗಿ ಬೆಂಗಳೂರಿನಲ್ಲಿ ವಾಸವಾಗಿರುವ ಮೂವರು ಮಾಜೀ ದಿವಾನರುಗಳ ಮನೆಯಲ್ಲಿ ಸೇವೆ ಮಾಡುವ ಜವಾನರುಗಳಿಗೆ ಮೈಸೂರು ಸರಕಾರ ಸಂಬಳವನ್ನು ಕೊಡುತ್ತಿದೆ. ಇವರ ಸಂಬಳ ಒಂದು ವರುಷಕ್ಕೆ ಸುಮಾರು ರೂ. 8,100 ಆಗುತ್ತದೆ. ಹಳೆಯ ಮೈಸೂರಿನಲ್ಲಿ ಸಂಪ್ರದಾಯಗಳೇನೇ ಇರಲಿ, ಅವುಗಳನ್ನೀಗ ಮುಂದೊರೆಸುವ ಅಗತ್ಯವಿಲ್ಲ, ಈ ಜವಾನರುಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು.

● ಲಾರಿ ಮತ್ತು ಟ್ರಾಕ್ಟರ್ ಆರ್ಗನೈಜೇಷನ್ನಿನಿಂದ 1957—58ರ ಅಂದಾಜಿನಲ್ಲಿ ಹೇಳುವಂತೆ ಜಮಾ 11 ಲಕ್ಷ

(೬ನೇ ಪುಟ ನೋಡಿ)

ಚುಟುಕ—ಚುರುಕ

ತೊಗಲು—ಬಾವಲಿ

ಅತ್ತ ಶ್ರೀ-ಮದ-ಮತ್ತ ಪಾಶವ ಬಲ
ಇತ್ತ ಜ್ಯೇಷ್ಠಾವರುಣ ಖಗಸಂಕುಲ
ಉತ್ತ ಬಣವೆರಡಕೂ
ಸುತ್ತು ತೊಳಲಾಡುತಿದೆ
ಮಧ್ಯವರ್ಗದ ತೊಗಲು-ಬಾವಲಿ ಕುಲ.

ಜನ—ಕೇಂದ

ಬಿಳಿಯ ಬ
ನರಳು
ಕೆರಳದಿರದ
ಸಮತೆ-

ಎಂ. ಅಕಬರ್ ಆಲಿ

ಸ್ಟಾಕ್‌ಹೋಂ ಅಧಿವೇಶನದಿಂದ ಪ್ರಪಂಚ ಪ್ರಕ್ಷುಬ್ಧತೆಯ ಶ

ಅಧ್ಯಕ್ಷ ಜ್ಯೂಲಿಯೋ ಕ್ಯೂರಿ ಅವರ ಆಶಯ

ಶಸ್ತ್ರಾಸ್ತ್ರಗಳ ಪೈಪೋಟಿಯನ್ನು ಮುಂದುವರಿಸುತ್ತಿರುವ ಬಗ್ಗೆಯೂ, ನೂತನ ಪ್ರಚ್ಛನ್ನ ಯುದ್ಧ ಸೂಚನೆಗಳ ಬಗ್ಗೆಯೂ ಗುರುತರವಾದ ಕಳವಳವು ಜನತೆಗಳಿಗುಂಟಾಗಿದೆಯೆಂದು ಜೊಲಿಯೋ ಕ್ಯೂರಿಯವರು ತಮ್ಮ ವರದಿಯ ಪ್ರಾರಂಭದಲ್ಲೇ ತಿಳಿಸಿದರು. ಆಲ್ಜೀರಿಯಾದಲ್ಲಿ ಯುದ್ಧವು ಈಗ ಸುಮಾರು ನಾಲ್ಕು ವರ್ಷಗಳಿಂದ ನಡೆಯುತ್ತಿದೆ. ಇಡೀ ಉತ್ತರ ಆಫ್ರಿಕಕ್ಕೆ ಅದು ಹಬ್ಬುವ ಭೀತಿಯುಂಟಾಗಿದೆ. ಲೆಬನಾನಿನಲ್ಲಿ ನಡೆದ ಸೈನಿಕ ಹಸ್ತಕ್ಷೇಪದ, ಮತ್ತು ಇರಾಕಿನ ವಿರೋಧವಾಗಿ ಮಾಡಲಾಗುತ್ತಿರುವ ಬೆದರಿಕೆಗಳ ಸುದ್ಧಿಯು ತುಂಬಾ ಕಳವಳವನ್ನುಂಟು ಮಾಡುತ್ತಿವೆ. ಈ ಸಂದರ್ಭದಲ್ಲಿ ನಾವು ನಮ್ಮ ಬದಲಾಗದ ನಿಲುಮೆಯನ್ನು ಪುನಃ ಸಮರ್ಥಿಸುತ್ತೇವೆ: ನಾವು ಬಲಾತ್ಕಾರ ಪ್ರಯೋಗಕ್ಕೆ ವಿರೋಧಿಗಳು ಅಂತರ ರಾಷ್ಟ್ರೀಯ ತಿಕ್ಕಾಟಗಳನ್ನು ಶಾಂತಿಯುತವಾಗಿ ಬಗೆಹರಿಸುವುದಕ್ಕೇ ನಮ್ಮ ಬೆಂಬಲ. ಜನತೆಗಳ ಅಂತರ್ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ನಾವು ವಿರೋಧಿಸುತ್ತೇವೆ.

ನೆನೆಗುದಿಯುದ್ಧದ ಲಕ್ಷಣಗಳು ಸ್ಪಷ್ಟವಾಗಿವೆ

ಪರಮಾಣು—ಜಲಜನಕ ಅಸ್ತ್ರಗಳ ಪರೀಕ್ಷಾಪ್ರಯೋಗಗಳನ್ನು ಕೊನೆಗಾಣಿಸುವುದು ಒತ್ತಡದ ಅವಶ್ಯಕತೆಯಾಗಿದೆ. ಇಂತಹ ಪರೀಕ್ಷಾ ಪ್ರಯೋಗಗಳನ್ನು ಕೊನೆಗಾಣಿಸಲು ಸೋವಿಯೆತ್ ಒಕ್ಕೂಟವು ಮಾಡಿರುವ ನಿರ್ಣಯವು ಅತ್ಯಂತ ಮಹತ್ವಪೂರ್ಣವಾದ ಗುಣಾತ್ಮಕ ಚರ್ಚೆಯಾಗಿದೆ. ಬ್ರಿಟನ್ ಮತ್ತು ಅಮೆರಿಕಾ, ಪರೀಕ್ಷಾಪ್ರಯೋಗಗಳನ್ನು ಮುಂದುವರಿಸುವ ಗುರುತರವಾದ ಜವಾಬುದಾರಿಯನ್ನು ವಹಿಸಿಕೊಂಡಿವೆ. ಈ ಪರೀಕ್ಷಾ ಪ್ರಯೋಗಗಳು ಅಪನಂಬಿಕೆಯನ್ನೂ, ನೆನೆಗುದಿ ಯುದ್ಧವನ್ನೂ ನಿರ್ದಿಷ್ಟವಾಗಿ ಸೂಚಿಸುತ್ತವೆ.

ಬೀಜಾಣು ಅಸ್ತ್ರಸನ್ಯಾಸದ ಬಗ್ಗೆಯೂ ಮತ್ತು ಅವುಗಳ ಪರೀಕ್ಷಾಪ್ರಯೋಗಗಳ ನಿಲುಗಡೆಯ ಬಗ್ಗೆಯೂ ಒಡಂಬಡಿಕೆ ಮಾಡಿಕೊಳ್ಳಲು ಸರ್ವಪ್ರಯತ್ನವನ್ನೂ ಮಾಡಬೇಕು.

ಎಲ್ಲ ದೇಶಗಳ ಜನತೆಗಳೂ ಶಾಂತಿಗಾಗಿ ಪರಿತಪಿಸುತ್ತಿರುವಾಗ, ನಿರಾಯುಧೀಕರಣ ಮಾತುಕತೆಗಳು ಇನ್ನೂ ಬಿಕ್ಕಟ್ಟಿಗೊಳಪಟ್ಟಿರುವುದು ವಿರೋಧಾಭಾಸವಾಗಿದೆ. ಕಾರ್ಮಿಕರ ಬೃಹತ್ ಸ್ತೋಮವನ್ನು ನಿರುದ್ಯೋಗದಿಂದ ಕಾಪಾಡಲು ಸೈನಿಕ ಉತ್ಪಾದನೆಯು ಅವಶ್ಯಕವೆನ್ನುವವರಿಗೆ,—ಶಸ್ತ್ರಾಸ್ತ್ರಗಳ ಪೈಪೋಟಿಗಾಗಿ ವೆಚ್ಚವಾಗುವ ಅಪಾರದ್ರವ್ಯದಲ್ಲಿ ಒಂದು ಅತಿ ಸಣ್ಣ ಭಾಗವು ಈ ಕಾರ್ಮಿಕರಿಗೂ, ಯಂತ್ರಶಿಲ್ಪಿಗಳಿಗೂ—ಇವರೆಲ್ಲರಿಗೂ ಸಾಂತಿ ಪ್ರಯೋಜನದ ಕೆಲಸವನ್ನು ಒದಗಿಸುವುದೆಂದು ಹೇಳಲೇಬೇಕು.

ಶಸ್ತ್ರಾಸ್ತ್ರಗಳು ಪ್ರಚ್ಛನ್ನ ಯುದ್ಧದ ಒಂದು ಅವಶ್ಯಕಾಂಶವೆಂದೂ, "ಬುಡಮೇಲು ಚಟುವಟಿಕೆಗಳನ್ನು" ವಿರೋಧಿಸುವ ಸಾಧನವೆಂದೂ, ಅಥವಾ ಇನ್ನೊಂದು ಶಿಬಿರದ ಮೇಲೆ ಒತ್ತಡ ಬೀರುವ ಸಾಧನವೆಂದೂ ಹಲವರು ನಂಬುತ್ತಾರೆ. ವಿಭಿನ್ನ ಆರ್ಥಿಕ, ಸಾಮಾಜಿಕ ವ್ಯವಸ್ಥೆಗಳ ಅಸ್ತಿತ್ವವು ವಾಸ್ತವ. ಎರಡು ರಾಜ್ಯವ್ಯವಸ್ಥೆಗಳ ಶಾಂತಿಯುತ ಸಹ—ಅಸ್ತಿತ್ವದ ಸೂತ್ರಗಳ ಪ್ರಾಮಾಣಿಕ ಅಂಗೀಕಾರದಿಂದ ಮಾತ್ರವೇ ಅಂತರರಾಷ್ಟ್ರೀಯ ತಿಕ್ಕಾಟಗಳನ್ನು ತಪ್ಪಿಸುವುದು ಸಾಧ್ಯವಾಗಬಲ್ಲದು.

ನಿರಾಯುಧೀಕರಣದ ಸಮಸ್ಯೆ

ನಿರಾಯುಧೀಕರಣದ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಪರಿಗಣಿಸಕೂಡದು. ಅಂತರ ರಾಷ್ಟ್ರೀಯ ಸಹಕಾರದ ಪ್ರಶ್ನೆಗಳೂ, ಅಂತರರಾಷ್ಟ್ರೀಯ ಉದ್ರಿಕ್ತತೆಗಳ ಉಪಶಮನವೂ ಒಟ್ಟಿಗೇ ಪರ್ಯಾಲೋಚಿಸಲ್ಪಡಬೇಕು. ನಿರಾಯುಧೀಕರಣ ಸಮಸ್ಯೆ

ಯನ್ನು ಅಧಿ
ಪರಿಶೀಲಿಸುವು
ನಿಸುತ್ತದೆ. ಪ್ರ
ಆಯುಧಗಳ ಪ
ಯು ಎಲ್ಲ ಜ
ಗಳಲ್ಲಿಯೂ—ಆ
ಕ, ಸಾಮಾಜಿ
ಡ,—ವೃದ್ಧಿಗೆ
ಮಾಡುವುದು.

1954ರಲ್ಲಿ
ಳೂ ಸೈನಿಕ
ಸೇನೆಗಳನ್ನೂ
ಇತ್ತೀಚೆಗೆ ಸ
ಹ ಚರ್ಯೆ
ಆರ್ಥಿಕ ಸ್ಥಿತಿ
ಗಿದೆ. ಇಂತಹ
ರೆ,—ವಿಶೇಷತ
ಕ್ಷುಬ್ಧತೆಯನ್ನು
ಯುಧೀಕರಣ
ಶಃ ಒಪ್ಪಂದ
ರೂ,—ಪ್ರತಿ
ಪರಿಣಾಮವನ
(ಅ

ಸ್ಟಾಕ್‌ಹೋಂ ಅಧಿವೇಶನದಲ್ಲಿ ಭ

ಸ್ಟಾಕ್‌ಹೋಂ ಅಧಿವೇಶನದಲ್ಲಿ ಭಾರತಕ್ಕೆ ಸಂದುದು ಯಾರಿಗೂ ಸಲ್ಲದ ವಿಶೇಷ ಮನ್ನಣೆ. ಸಂಯುಕ್ತ ರಾಷ್ಟ್ರದ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಶೀಲ್ಡ್ ಅವರಿಗೆ ಮನವಿಯೊಂದನ್ನು ಸಲ್ಲಿಸಲು ಸ್ಟಾಕ್‌ಹೋಂ ನಿರಾಯುಧೀಕರಣ ಮತ್ತು ಅಂತರ್ರಾಷ್ಟ್ರೀಯ ಸಹಕಾರ ಅಧಿವೇಶನವು ಭಾರತದ ಪ್ರತಿನಿಧಿ ಶ್ರೀಮತಿ ರಾಮೇಶ್ವರಿ ನೆಹ್ರೂ ಅವರಿಗೆ ವ್ಯಕ್ತಿಗತವಾಗಿ ವಹಿಸಿಕೊಟ್ಟಿತು. ಲ್ಲಿ "ಮಧ್ಯಪ್ರಾಚ್ಯದ ವ್ಯವಹಾರಗಳಲ್ಲಿ ಪ್ರವೇಶಿಸಿದ ಶಕ್ತಿಗಳು ತಕ್ಷಣ ವಾಪಸ್ಸಾಗಬೇಕು, ಮತ್ತು ಅಲ್ಲಿಯ ಸ್ಥಿತಿಯ ಪರಿಶೀಲನೆಗಾಗಿ ತಕ್ಷಣವೇ ಸರ್ವಸಸದ್ಯರ ಸಭೆಯನ್ನು ಕರೆಯಬೇಕು" ಎಂಬುದಾಗಿ ಈ ಮನವಿಯಲ್ಲಿ ಹೇಳಲಾಗಿತ್ತು.

ಭಾರತೀಯ ಪ್ರತಿನಿಧಿಗಳು ಈ ಅಧಿವೇಶನದಲ್ಲಿ ಮಾಡಿದ ಕಾರ್ಯ ಅತ್ಯಂತ ಪ್ರಭಾವಕಾರಿಯಾದುದಾಗಿತ್ತು. ಈ ಪ್ರತಿನಿಧಿ ಮಂಡಳ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿತ್ತು. ಸೋವಿಯತ್ ರಷ್ಯದ ಹೆಸರಾಂತ ಬರೆಹಗಾರ ಶ್ರೀ ಇಲ್ಯಾ ಎಹ್ರೆನ್‌ಬರ್ಗ್ ಭಾರತೀಯ ಪ್ರತಿನಿಧಿ ಮಂಡಳದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ "ಸಂಖ್ಯೆಯಲ್ಲಷ್ಟೇ ಅಲ್ಲ, ಗುಣದಲ್ಲಿ ಕೂಡ ಒಳ್ಳೇ ಪ್ರಭಾವಕಾರೀ ಪ್ರತಿನಿಧಿ ಮಂಡಳ" ಎಂದು ಹೇಳಿದರು.

★ ಅರಬ್ ರಾಷ್ಟ್ರಗಳಲ್ಲಿ ನಡೆದ ಹಸ್ತಕ್ಷೇಪವನ್ನು ಕೊನೆಗಾಣಿಸುವದಕ್ಕಾಗಿ ಮಹಾ ರಾಷ್ಟ್ರಗಳ ಪ್ರತಿನಿಧಿಗಳ ಸಭೆ ಕೂಡಲೇ ನಡೆಯ

ಬೇಕೆಂಬ ಗೊ
ಮನ್‌ಲಾಲ್
ದ್ದರು.
★ ಅಧಿವೇ
ರಾಜಕೀಯ ಸ
ಅನೂಪ್ ಸಿಂಗ
ಡಲ್ಪಟ್ಟಿತ್ತು.
ದ ಶಿಫಾರಸುಗ
ಸೈಪ್ರೆಸ್ ಮತ್ತು
ಯೆತ್‌ನಾಮ್
ಹಾಗೂ ಪಶ್ಚಿ
ವಾಗಳ ವಾಪ
ದೇಶಗಳಾದ ಭ
ಯಾಗಳಿಗಾಗ
ನೀಡಿತು.
★ ಭಾರತ
ಗಳ ಪ್ರತಿನಿಧಿ
ಇಲ್ಲಿ ನಡೆಯಿತ
ಭಷಾನಿಯವರ
ರತ—ಪಾಕಿಸ್ತಾ
ರೂ ಕೂಡ ಪಾ
ದಲ್ಲಿ ನಡೆದ ದು
ತೀಯ ಜನತೆಯ
ಎಂದು ಆಶ್ವಾ
★ ಜುಲ್ಯಾ
ಯ ಪ್ರತಿನಿಧಿ
ಮೂರನೆಯ
ಅಧಿವೇಶನದ
ಲು ಕೈಕೊಳ್ಳ
ಸುವುದು.

ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಕೇರಳ ಸರಕಾರಕ್ಕೆ ಬೆಂಬಲವಾಗಿ ನಿಲ್ಲಬೇಕು

ಕೇರಳದಲ್ಲಿಯ ಗಲಭೆಗಳನ್ನು ನಿರ್ವಿಕಾರ ಚಿತ್ತದಿಂದ ಪರಿಶೀಲಿಸಿರಿ, ಶಾಂತಿ ಸ್ಥಾಪನೆಗೆ ನೆರವಾಗಿರಿ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಮನವಿ

"ಜುಲೈ ೩೧ರಂದು ನಡೆದ ಗೋಲಿಬಾರ್ ಪ್ರಸಂಗದಲ್ಲಿ ಇಬ್ಬರು ಕಾರ್ಮಿಕರು ಮೃತರಾದರೆಂಬ ದುಃಖದಾಯಕ ವಾರ್ತೆಯನ್ನು ಸೆಕ್ರೆಟರಿಯೆಟ್ ತಿಳಿಯಿತು. ಈ ದುಃಖದಲ್ಲಿ ನಮ್ಮ ಪಾರ್ಟಿಯೂ, ಈಗ ಹದಿನಾರು ತಿಂಗಳಿನಿಂದ ಕೇರಳ ಜನತೆಯ ಅಭಿವೃದ್ಧಿ ಸೇವೆಗಳಿಗಾಗಿ ಯಥಾಶಕ್ತಿ ಮೀರಿ ದುಡಿಯುತ್ತಿರುವ ನಮ್ಮ ಪಾರ್ಟಿಯ ಸರಕಾರವೂ ಸಮಭಾಗಿಯಾಗಿದೆ. ಸೆಕ್ರೆಟರಿಯೆಟ್ ಮೃತರಾದವರ ಕುಟುಂಬಗಳಿಗೆ ತನ್ನ ಸಂಪೂರ್ಣ ಸಹಾನುಭೂತಿಯನ್ನು ತೋರಿಸುತ್ತದೆ.

"ಈ ದುರ್ದೈವಿ ಪ್ರಸಂಗವನ್ನು ಪ್ರತಿಪಕ್ಷಗಳವರು ದುರುಪಯೋಗಪಡಿಸಿಕೊಂಡು ಪರಿಸ್ಥಿತಿಯನ್ನು ಇನ್ನೂ ಕೆಡಿಸುವುದಕ್ಕೂ ಕೇರಳ ಸರಕಾರದ ಹೆಸರನ್ನು ಕೆಡಿಸಲೂ ಪ್ರಯತ್ನಿಸುತ್ತಿರುವುದು ಶೋಚನೀಯ".

ಎಂಬುದಾಗಿ ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಕೌನ್ಸಿಲ್ಲಿನ ಹೇಳಿಕೆಯು ಬಿಡುಗಡೆಯಾಗಿ ಪ್ರತಿಗಾಮಿ ಶಕ್ತಿಗಳ ಸೋಲಿಗೂ ಕೇರಳ ಸರ್ಕಾರಕ್ಕೆ ಬೆಂಬಲ ನೀಡಲೂ ಕೇರಳದಲ್ಲಿ ಪ್ರಜಾಪ್ರಭುತ್ವ ಹಾಗೂ ಶಾಂತಿ ಸ್ಥಾಪನೆಗೂ ದೇಶದ ಪ್ರಜಾಪ್ರಭುತ್ವ ಹಾಗೂ ಪುರೋಗಾಮಿ ಶಕ್ತಿಗಳಿಗೆಲ್ಲ ಕರೆ ಕೊಟ್ಟದೆ.

ಕಮ್ಯೂನಿಸ್ಟ್ ಪಾರ್ಟಿಯ ಹೇಳಿಕೆಯ ಮುಖ್ಯಾಂಶಗಳು ಹೀಗಿವೆ:

ವಿರೋಧಿಗಳ ಹಿಂಸಾನೀತಿ

ಕಮ್ಯೂನಿಸ್ಟ್ ಸಚಿವ ಸಂಪುಟವು ಸಾಧಿಸುತ್ತಿರುವ ಯಶಸ್ಸಿನ ಬಗ್ಗೆ ಕರಬುತ್ತಿದ್ದ ಪ್ರತಿಪಕ್ಷಗಳೆಲ್ಲ ಒಂದೆಡೆ ಸೇರಿ ಸರ್ಕಾರವು ಬಲಪ್ರಯೋಗವನ್ನು ನಡೆಸುವಂತೆ ಹಿಂಸಾತ್ಮಕ ನೀತಿಯನ್ನನುಸರಿಸಿದವು. ಎಂಥ ಅಸಂಬದ್ಧ ವಿಚಾರಗಳನ್ನೂ ಸಮಸ್ಯೆಗಳನ್ನೂ ಸರಕಾರದ ವಿರುದ್ಧ ಉದ್ರೇಕಗೊಳಿಸುವಂತೆ ಮಾಡಲಾಯಿತು. ಶೈಕ್ಷಣಿಕ ಮಸೂದೆಗಾಗಿ ಧಾರ್ಮಿಕ ಹಾಗೂ ಕೋಮುವಾರ ಭಾವನೆಗಳನ್ನು ಕೆರಳಿಸಲಾಯಿತು. ಪಾರ್ಟಿಯ ಸದಸ್ಯರನ್ನು ಹಿಂಸೆಗೂ ಸಾವಿಗೂ ಈಡು ಮಾಡಲಾಯಿತು. ಆದರೆ ದೇವಿಕುಲಂ ಉಪಚುನಾವಣೆಯು ಈ ಅಪಪ್ರಚಾರಕರನ್ನು ಮತ್ತು ವಸ್ತುಸ್ಥಿತಿಯನ್ನು ವಿಪರ್ಯಾಸಗೊಳಿಸುವವರನ್ನು ಜನರಿಂದ ದೂರ ಮಾಡಿತು. ಚುನಾವಣೆಯು ಜನತೆ ಸರಕಾರದ ಪರವಾಗಿದೆಯೆಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿತು.

ವಿನಾಕಾರಣ

ಹತಾಶರಾದ ಪ್ರತಿಪಕ್ಷಗಳವರು ಕ್ಯಾಥೋಲಿಕ್ ಶೈಕ್ಷಣಿಕ ಸಂಸ್ಥೆಗಳ ಸಹಾಯದಿಂದ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾರಂಭಿಸಿದರು. ಸರ್ಕಾರವು ಸ್ಥಳೀಯ ಶಾಲೆಯೊಂದರ ವಿದ್ಯಾರ್ಥಿ ವಿಭಾಗವೊಂದಕ್ಕೆ ಪಂಕ್ತಿ ಭೇದದ ವಿಶೇಷ ರಿಯಾಯಿತಿಗಳನ್ನು ನೀಡಬೇಕೆಂದು ಚಳವಳದ ಬೆಂಕಿಗೆ ಗಾಳಿಬೀಸಿದರು. ಸರ್ಕಾರವು ಎಲ್ಲರಿಗೂ ಸೌಕಾರಿಯಾಯಿತಿಗಳನ್ನು ಸರಿಯಾಗಿಯೇ ನೀಡಿತ್ತು. ಈ ರಿಯಾಯಿತಿ ಯಾವ ಬಹುಸಂಖ್ಯಾತ ವಿದ್ಯಾರ್ಥಿಗಳಿಗೂ ಅನ್ಯಾಯದ್ದಾಗಿಲ್ಲವೆಂದೂ ಸ್ಪಷ್ಟೀಕರಣ ನೀಡಿತು. ಆದರೆ ಪ್ರತಿಪಕ್ಷಗಳವರಿಗೆ ಇದನ್ನೇ ಒಂದು ರಾಜಕೀಯ ಬಂಡವಾಳವನ್ನಾಗಿಸಿಕೊಂಡು ಕಮ್ಯೂನಿಸ್ಟ್ ಪಾರ್ಟಿಯೂ, ಸರ್ಕಾರವೂ ಒಂದು ಬೇರೆ ದಾರಿಯನ್ನು ಹಿಡಿಯುವಂತೆ ಮಾಡುವುದು ಬೇಕಾಗಿತ್ತು.

ಜನರನ್ನು ಹಿಂಸಾಪ್ರವೃತ್ತರನ್ನಾಗಿಸುವ ಕಾರ್ಯವನ್ನು ಅವರು ನಿಲ್ಲಿಸಲಿಲ್ಲ. ಕಮ್ಯೂನಿಸ್ಟ್ ಪಾರ್ಟಿಯ ನಾಯಕತ್ವದಲ್ಲಿರುವ ಜನಸಮೂಹ ಸರಕಾರದ ಪರ ಪ್ರದರ್ಶನಗಳನ್ನು ನಡೆಸಿದಾಗ ಅವರ ಮೇಲೆ ಧಾಳಿ ನಡೆಸಿ ಗಲಭೆಗಳನ್ನು ಸೃಷ್ಟಿಸತೊಡಗಿದರು. ಕಾ॥ ಇ. ಎಂ. ಎಸ್.ರವರ ಭಾಷಣದ ಅಪಪ್ರಚಾರ ನಡೆಸಿ ಕಮ್ಯೂನಿಸ್ಟರಿಗೆ ಅಂತರ್ಯುದ್ಧ ಬೇಕಾಗಿದೆ ಎಂದು ಪ್ರಚಾರ ನಡೆಸಿ ಕೊನೆಗೆ ಪೋಲೀಸರು ಗೋಲಿಬಾರ್ ನಡೆಸುವ ಪರಿಸ್ಥಿತಿಯನ್ನು ತಂದಿಟ್ಟರು.

ಅವರ ಉದ್ದೇಶ

ಈ ವಸ್ತುಸ್ಥಿತಿಯನ್ನೆಲ್ಲ ಪರಿಶೀಲಿಸಲಾಗಿ ಕೇರಳದಲ್ಲಿಯ ಪ್ರತಿಪಕ್ಷಗಳವರಿಗೆ ಸರಕಾರಕ್ಕೆ ಕಪ್ಪು ಮಸಿ ಬಳೆದು ಅದು ಶರಣಾಗತವಾಗುವಂತೆ ಮಾಡುವುದೇ ಅವರ ಉದ್ದೇಶವಾಗಿತ್ತೆಂದು ಸೆಕ್ರೆಟರಿಯೆಟ್ ಮನಗಂಡಿದೆ. ಸರಕಾರದ ಸಾಮಾನ್ಯ ಆಡಳಿತ ಕಾರ್ಯಗಳೂ ನಡೆಯದಂತೆ ಅವರು ಪ್ರಯತ್ನಪಟ್ಟರು. ಕೇರಳ ಸರ್ಕಾರವನ್ನು ಅಪ್ರಜಾಸತ್ತಾತ್ಮಕ ವಿಧಾನಗಳಿಂದಾದರೂ ಉರುಳಿಸುವ ತಮ್ಮ ಧ್ಯೇಯವನ್ನು ಅವರು ಬಚ್ಚಿಡಲಿಲ್ಲ. ಕೇಂದ್ರವು ಕೈಹಾಕುವುದು ಅವರಿಗೆ ಬೇಕಾಗಿತ್ತು.

ಮೂಲ ಕಾರಣ

ಕೇರಳದಲ್ಲಿಯ ಪ್ರತಿಪಕ್ಷಗಳವರು ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ಜನರ ಹಿತಚಿಂತನೆಗೆ ಗಮನಕೊಟ್ಟು ನಡೆದುಕೊಳ್ಳುತ್ತಿಲ್ಲ. ಆದರೆ ವಿದೇಶಿ ಪಟ್ಟಭದ್ರರ ಹಾಗೂ ತೋಟಗಳ ಮಾಲೀಕರ ಹಿತಚಿಂತನೆಗನುಗುಣವಾಗಿ ನಡೆಯುತ್ತಿದ್ದಾರೆ. ಈ ಪ್ರತಿಗಾಮಿ ನಡವಳಿಕೆಗೆ ಕಾರಣ ಕೇರಳ ಸರ್ಕಾರವು ಕೈಕೊಳ್ಳುತ್ತಿರುವ ಪ್ರಗತಿಪರವಾದ ಬೇಸಾಯದ ಹಾಗೂ ಕಾರ್ಮಿಕ ಕಾನೂನುಗಳು—ನೀತಿಗಳು. ಜನರ ಹಿತಚಿಂತನೆಯ ಮುನ್ನಡೆಯ ದಾರಿಯಿಂ

(೯ನೇ ಪುಟ ನೋಡಿ)

ಹುರಿಗಾಳು

● ದಕ್ಷಿಣ ಕನ್ನಡ ಜಿಲ್ಲೆಯ ಅಧ್ಯಾಪಕರುಗಳಿಗೆ ಮೂರು ತಿಂಗಳು ಸಂಬಳ ಬಾರದುದರಿಂದ ಮನವಿ, ಆರ್ತಕೂಗು ಮುಂತಾದುವುಗಳೆಲ್ಲ ಮುಗಿದರೂ ಸರ್ಕಾರ 'ದಾದ್' ಮಾಡದುದರಿಂದ ಸಂಬಂಧಿಸಿದವರೊಬ್ಬರು ಆಮರಣ ಉಪವಾಸ ಮುಷ್ಕರ ಹೂಡುವದಾಗಿ ಸರ್ಕಾರಕ್ಕೆ ಕಾಗದ ಬರೆದ ಕೂಡಲೆ ಸಂಬಳ ಬಟವಾಡೆಗೆ ಆಜ್ಞೆ ಬಂತಂತೆ.

ಇಷ್ಟು ದಿನವಾದರೂ ಅಧ್ಯಾಪಕರುಗಳು ಊಟ ಮಾಡಿಕೊಂಡೇ ಇದ್ದರಲ್ಲ ಎಂಬುದಾಗಿ ಇದರಿಂದ ಅರ್ಥವಾಗುವದರಿಂದ ಮೈಸೂರು ಸರಕಾರದ ವಲಯಗಳಲ್ಲಿ ಸಂತೋಷ ವ್ಯಕ್ತಪಡಿಸಲಾಯಿತಂತೆ.

o o o

ಅರಬ್ ರಾಷ್ಟ್ರೀಯತೆಗೆ ಪ್ರೋತ್ಸಾಹ ನೀಡುವುದು ಭಾರತಕ್ಕೆ ಅತ್ಯಂತ ಅಪಾಯಕಾರಿಯೆಂದೂ ಈಜಿಪ್ಟಿನ ಗಮಾಲ್ ಅಬ್ದುಲ್ ನಾಸ್ಸೇರ್ ಮುಸಲ್ಮಾನನೆಂದೂ ಭಾರತಕ್ಕೆ ಗಂಡಾಂತರವಿರುವುದಾದರೆ ಈ ಮುಸಲ್ಮಾನರಿಂದಲೇ ಎಂದೂ ಬೆಂಗಳೂರಿನ ಲಿಬರ್ಟೇರಿಯನ್‌ರೊಬ್ಬರು ಲಿಬರ್ಟೇರಿಯರ್ನ ಕೊಠಡಿ ಸಭೆಯಲ್ಲಿ ಆರ್‌ಡಬ್ಲೆಸ್ (ಮತ್ತಿನ್ನಿತರ) ಪ್ರೇಕ್ಷಕರೆದುರು ಫಿಲಿಪ್ ಸ್ಪ್ರಾಟ್‌ರವರ ಅಧ್ಯಕ್ಷತೆಯಲ್ಲಿ ಮಾತನಾಡುತ್ತ ಹೇಳಿದರಲ್ಲದೆ ಮಧ್ಯಪ್ರಾಚ್ಯದಲ್ಲಿ ಅಮೇರಿಕೆಯ ಹಸ್ತಕ್ಷೇಪ ನ್ಯಾಯವಾದುದೆಂದೂ ಪ್ರತಿಪಾದಿಸಿದರು.

ಹಿಂದೂ ಮಹಾಸಭೆಯ ಈ ಮಹನೀಯರು ಇತ್ತೀಚೆಗೆ ಲಿಬರ್ಟೇರಿಯನ್‌ಗೆ ಕನ್ವರ್ಟ್ ಆದ ಬಳಿಕ ಅಮೇರಿಕೆಯ ಏಜಂಟರಾಗಿಯೂ ಪರಿವರ್ತಿತರಾಗಿದ್ದಾರೆಂಬುದು ಇನ್ನೂ ದೃಢಪಡಬೇಕಾದ ವಿಷಯವೆಂದು ರಾಜಕೀಯ ಸಂದೇಹವಾದಿಗಳ ಸಂಶಯ.

o o o

ಅರಬ್ ರಾಷ್ಟ್ರೀಯತೆಯನ್ನು ಹೀಗಳೆದು ಸೈನಿಕ ಸಂಧಾನಗಳಿಗೆ ಬೆಂಬಲವಿತ್ತ ಆವಾಮಿ ಲೀಗ್ ನಾಯಕ ಸುಹ್ರಾವರ್ದಿ ಲಾಹೋರದಲ್ಲಿ ಮಾತನಾಡುತ್ತಿದ್ದಾಗ ಮುಸ್ಲಿಮ್ ಜನತೆಯೇ ಅವರಿಗೆ ಕಲ್ಲು ಬಿಸಾಕಿತಂತೆ.

ಅರಬ್ ರಾಷ್ಟ್ರೀಯತೆಯನ್ನು ಹೀಗಳೆಯುವಲ್ಲಿ ಬೆಂಗಳೂರಿನ ಸದರೀ ಹಿಂದೂ ಮಹಾಸಭೆಯ ನಾಯಕರು ಮತ್ತು ಮುಸ್ಲಿಮ್ ಜಾತ್ಯಾಂಧ ನಾಯಕ ಸುಹ್ರಾವರ್ದಿ ಇಬ್ಬರೂ ಒಂದಾಗಿರುವುದನ್ನು ಕಂಡು ಭಾರತೀಯರನ್ನು ಹಿಂದು ಮುಸ್ಲಿಮರೆಂದು ಇಬ್ಭಾಗಿಸಿದ ಬಿಳಿಯ ವರ್ಗಗಳಲ್ಲಿ ಈ ಬಗ್ಗೆಯೂ ಕೂಡಾ ಸಂತೋಷಪಡಲಾಗಲಿಲ್ಲವಂತೆ.

o o o

ನಗರದಲ್ಲಿ ಪೋಲೀಸರ ಪತ್ತೆ ಕಾರ್ಯ ಹೆಚ್ಚಿದೆಯೆಂದು ಡಿ. ಐ. ಜಿ ಶ್ರೀ ಚಾಂಡಿಯವರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳುತ್ತ 1955ರಲ್ಲಿ 421 ಜೂಜು ಅಪರಾಧಿಗಳ ಪತ್ತೆ, 57ರಲ್ಲಿ 583, 58ರಲ್ಲಿ 655 ಪತ್ತೆಯಾದುವೆಂದೂ ವ್ಯಭಿಚಾರಗಳು 1955ರಲ್ಲಿ 205, 57ರಲ್ಲಿ 637 ಮತ್ತು 58ರಲ್ಲಿ 681 ಪತ್ತೆಯಾದುವೆಂದೂ ಹೀಗೆ ಇನ್ನೂ ಅನೇಕ ಅಂಕಿ ಅಂಶಗಳನ್ನಿತ್ತಿದ್ದಾರೆ.

ಪೋಲೀಸ್ ದಕ್ಷತೆ ಹೆಚ್ಚಿದೆಯೋ ಅಥವಾ ಅಪರಾಧಗಳ ಸಂಖ್ಯೆಯೂ ಹೆಚ್ಚುತ್ತಿದೆಯೋ ಎಂಬುದಿನ್ನೂ ಪತ್ತೆಯಾಗಬೇಕಾದ ವಿಷಯವೆಂದು ನಮ್ಮ ಪತ್ತೇದಾರರ ಪತ್ರಿಕಾ ಪ್ರಕಟಣೆಗೆ ನಾವೇನು ಕಾದು ಕೊಂಡಿಲ್ಲ.

o o o

"ಹಿರಿಯರ ಪಕ್ಷ ವೈಷಮ್ಯಗಳಲ್ಲಿ ವಿದ್ಯಾರ್ಥಿಗಳು ತಲೆಹಾಕಕೂಡದು" ಎಂದು ಕೇಂದ್ರ ರಕ್ಷಣಾ ಸಚಿವ ಶ್ರೀ ವಿ. ಕೆ. ಕೆ. ಮೆನನ್ ಕಲ್‌ಕಟ್ಟಾದಲ್ಲಿ ಹೇಳಿದರಂತೆ.

'ಕ್ಯಾಲಿಕಟ್' ಎಂಬುದು ಮುದ್ರಾರಾಕ್ಷಸನ ಹಾವಳಿಯಿಂದ 'ಕಲ್‌ಕಟ್ಟೆ' ಎಂದೇನಾಗಿಲ್ಲವಷ್ಟೆ ಎಂದು ವಿದ್ಯಾರ್ಥಿ ಗಲಭೆ ಪ್ರದೇಶವಾದ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ದಾಮೋದರ ಮೆನನ್‌ರು ಮತ್ತೆ ಮತ್ತೆ ನೋಡಿಯೇ ನೋಡಿದರೆಂಬುದು ಖಚಿತವಾಗಬೇಕಾಗಿರುವ ಸುದ್ದಿ.

o o o

ದೇಶದಲ್ಲಿ ಕಾರ್ಮಿಕ ಸಂಘಗಳ ಹತೋಟಿಗಾಗಿ ಆಳುವ ಪಕ್ಷದ (ಅರ್ಥಾತ್ ಕಾಂಗ್ರೆಸ್ಸ್—ಚೌಚಾ). ಸಂಚಾಲಕತ್ವದ ಇಂಟೆಕ್‌ನ್ನು ಪರೋಕ್ಷವಾಗಿಯೋ, ಅಪರೋಕ್ಷವಾಗಿಯೋ ಕಾರ್ಮಿಕರ ಮೇಲೆ ಹೇರಲು ಸರ್ಕಾರವು ಯತ್ನಿಸುತ್ತಿರುವುದೇ ಇಂದಿನ ಕಾರ್ಮಿಕ ತೊಂದರೆಗಳಿಗೆ ಕಾರಣವೆಂದು ಮುಂಬೈ ಗಿರಣಿ ಮಾಲೀಕರ ಸಂಘದ ಮಾಜೀ ಅಧ್ಯಕ್ಷ ವಿ. ಎನ್. ಚಂದಾವರ್ಕರ್ ಮುಂಬೈನಲ್ಲಿ ಹೇಳಿದರಂತೆ.

ಗಿರಣಿ ಮಾಲೀಕರ ಸಂಘದ ಮಾಜೀ ಅಧ್ಯಕ್ಷರು Via ಮಾಲೀಕರಿಂದ ಸರಕಾರದ ಪರವಾದವರಾಗಿ ಆ Viaದಿಂದ ಕಾಂಗ್ರೆಸ್ ಪರವಾಗಿರಬಹುದೆಂದು ಭಾವಿಸಿದ್ದ ಕಾಂಗ್ರೆಸ್ ಮಾಲೀಕತ್ವದ ಇಂಟೆಕ್ ವಲಯದಲ್ಲಿ ಭಾರೀ ನಿರಾಶೆಯುಂಟಾಗಿದೆಯಂತೆ. ಬೆಂಗಳೂರಿನ 'ಇಂಟೆಕ್'ನಲ್ಲಂತೂ ಇನ್ನೂ ಕಳವಳ ಉಂಟಾಗಿದೆಯಂತೆ.

o o o

ನೀವು ಕುರುಕಿಸುವ ಈ ಹುರಿಗಾಳಿನಲ್ಲಿ ಬೆಂಗಳೂರಿನ 'ಪ್ರಜಾವಾಣಿ'ಯ 'ಭೂಬಾಣ'ದಿಂದೊಂದನ್ನು ಇಲ್ಲಿ ಕೊಡಲಾಗಿದೆ.

"ಕೇರಳದ ಕಮ್ಯೂನಿಸ್ಟ್ ಸರಕಾರದವರು **ಗೋಳಿಬಾರಿಗೆ ಕೈಹಾಕುವುದನ್ನು ತಪ್ಪಿಸಬೇಕು** [ದಪ್ಪಕ್ಷರ ನಮ್ಮದು] ಇಲ್ಲವಾದರೆ, ಅಧಿಕಾರಕ್ಕೆ ರಾಜಿನಾಮೆ ಕೊಡಿರೆಂದು ಪಾರ್ಟಿಯ ಕೇಂದ್ರ ಸಮಿತಿ ಆದೇಶ ನೀಡಬಹುದು" ಎಂದು ಕಮ್ಯೂನಿಸ್ಟ್ ನಾಯಕ ಡಾಂಗೆಯವರು ಹೇಳಿದಾರೆ. ಕಮ್ಯೂನಿಸ್ಟ್ ಸರ್ಕಾರದವರು ರಾಜೀನಾಮೆಯಿತ್ತರೆ ಖಾಲಿಯಾಗುವ ಜಾಗವನ್ನು ತತ್‌ಕ್ಷಣ ಅಲಂಕರಿಸಿ, ಆ ಬಗ್ಗೆ ಪ್ರತಿಭಟಿಸುವವರ ಮೇಲೆ ಗೋಳಿಬಾರ್ ನಡೆಸಿ, ಆ ತತ್‌ಕ್ಷಣ ನ್ಯಾಯಾಂಗ ವಿಚಾರಣೆಗೆ ಅಜ್ಞೆ ಮಾಡಲು ಕೇರಳದ ಕಾಂಗ್ರೆಸ್ ಮತ್ತು ಪಿ.ಎಸ್.ಪಿ. ಪಾರ್ಟಿಗಳವರು ಸಿದ್ಧರಾಗಿದ್ದಾರೆ!"

—'[illegible]'

ಕೇರಳ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಹೇಳಿಕೆ

(೩ನೇ ಪುಟದಿಂದ)

ವ ಜನತೆಯ ತೀರ್ಪನ್ನು ಒಪ್ಪಿಗೊಳ್ಳಲು ತಯಾರಿಲ್ಲ; ಕಮ್ಯೂನಿಸ್ಟ್—ವಿದ್ವೇಷದ ಕುರುಡು ದೃಷ್ಟಿಯನ್ನು ಬಿಡಲು ತಯಾರಿಲ್ಲ. ಸಹಕಾರ ಭಾವನೆಯಿಂದ ಕೇರಳದ ಸಮಸ್ಯೆಗಳನ್ನು ಬಗೆಹರಿಸಲು ಸಹಾಯವನ್ನು ಅವರಿಂದ ಜನತೆ ನಿರೀಕ್ಷಿಸಿತ್ತು. ಆದರೆ ಅದರ ಬದಲಾಗಿ, ದೇವಿಕುಳಂ ಚುನಾವಣೆಯಲ್ಲಿ ಅವರಿಗಾದ ಸೋಲಿನಿಂದ ನಿರಾಶೆಗೊಂಡು, ಅಸಹಾಯಕತೆಯ ಮನೋಭಾವದಿಂದ, ಹೆಚ್ಚು ಹೆಚ್ಚು ಸಾಹಸ ಕೃತ್ಯಗಳಿಗೂ ಹಿಂಸಾಚಾರಗಳಿಗೂ ತೊಡಗಿದ್ದಾರೆ.

ಕೇರಳದ ಸಮಸ್ಯೆಗಳನ್ನು ಚರ್ಚಿಸಲು ಕರೆಯಲಾದ ಪಾರ್ಲಿಮೆಂಟ್ ಸದಸ್ಯರ ಸಭೆಯಲ್ಲಿ ಅವರು ಭಾಗವಹಿಸಲಿಲ್ಲ. ವಿವಾದವನ್ನು ಮಾತುಕತೆಗಳಿಂದ ತೀರ್ಮಾನ ಮಾಡಲು ಸರಕಾರ ತಯಾರಿದ್ದರೂ ಅವರು ಹೋರಾಟವನ್ನು ಹಿಂತೆಗೆಯಲು ತಯಾರಿರಲಿಲ್ಲ (ಈಗ ಹಿಂತೆಗೆದಿದ್ದಾರೆ). ವಿದ್ಯಾರ್ಥಿಗಳ ಬೇಡಿಕೆಗಳ ಬಗೆಗೆ ಕೆ. ಪಿ. ಸಿ. ಸಿ. ಅಧ್ಯಕ್ಷರು ಒಪ್ಪಿಕೊಂಡಿದ್ದ ಶರ್ತಗಳನ್ನು ಕೂಡ ಮಾನ್ಯಮಾಡಿ ಜಾರಿಗೆ ತರಲು ಅವರು ತಯಾಲಿರಿರಲ್ಲ. ಅವರು ಹೆಚ್ಚು ಹೆಚ್ಚಾಗಿ ಕೆಥೋಲಿಕ್ ಚರ್ಚ್ ಮತ್ತು ಪ್ರತಿಗಾಮಿಗಳ ನಿರ್ಬಂಧಕ್ಕೆ ತಲೆ ಬಾಗುತ್ತಿದ್ದಾರೆ. ಕಮ್ಯೂನಿಸ್ಟರನ್ನು ಪ್ರತ್ಯೇಕಗೊಳಿಸಿ ನಿರ್ಮೂಲನ ಮಾಡುವುದಾಗಿ, ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸುವುದಾಗಿ, ಕಂದಾಯ ನಿರಾಕರಣೆಯ ಚಳುವಳಿ ಆರಂಭಿಸುವುದಾಗಿ ಮತ್ತು ಗಾಂಧಿವಾದೀ ಸಮರ ಮಾರ್ಗಗಳನ್ನು ಬಿಟ್ಟು ಬೇರೆ ಮಾರ್ಗಗಳನ್ನು ಅನುಸರಿಸುವುದಾಗಿ ಅವರು ಬಹಿರಂಗವಾಗಿ ಹೇಳುತ್ತಿದ್ದಾರೆ. ಅವರು, ಕಮ್ಯೂನಿಸ್ಟ್ ಪಾರ್ಟಿಯು ಅಂತರ್ಯುದ್ಧಕ್ಕೆ ತಯಾರು ಮಾಡುತ್ತಿದೆಯೆಂದೂ ಪ್ರತಿಪಕ್ಷಗಳ ಅಸ್ತಿತ್ವಕ್ಕೆನೇ ಅಪಾಯ ಉಂಟಾಗಿದೆಯೆಂದೂ ತಾವು ನಡೆಸುತ್ತಿರುವ ನಿರಾಧಾರವಾದ ಪ್ರಚಾರದ ನೆಪದಲ್ಲಿ ಇದನ್ನೆಲ್ಲ ಮಾಡುತ್ತಿದ್ದಾರೆ.

ಅಪಪ್ರಚಾರ ಚಳುವಳಿ

ಇದು ಕಮ್ಯೂನಿಸ್ಟ್ ಪಾರ್ಟಿಯನ್ನು ನಿಂದಿಸಲು ಉದ್ದೇಶಪೂರ್ವಕವಾಗಿ ನಡೆಸಲ್ಪಡುವ ಅಪಪ್ರಚಾರವೆಂದು ಸ್ಪಷ್ಟಪಡಿಸಲು ನಾವು ಇಚ್ಛಿಸುತ್ತೇವೆ. ಕಮ್ಯೂನಿಸ್ಟ್ ಪಾರ್ಟಿಯು ಅಂತರ್ಯುದ್ಧವನ್ನು ಆಶಿಸುವುದಿಲ್ಲ. ಬದಲಾಗಿ, ರಾಷ್ಟ್ರೀಯ ಪುನರ್ನಿರ್ಮಾಣದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು, ಎಲ್ಲ ಜನವಿಭಾಗಗಳ ರಾಷ್ಟ್ರೀಯ ಐಕ್ಯತೆಯನ್ನು ಕಮ್ಯೂನಿಸ್ಟ್ ಪಾರ್ಟಿ ಅಪೇಕ್ಷಿಸುತ್ತದೆ.

ಅಮೃತಸರದಲ್ಲಿ ಜರುಗಿದ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಅಧಿವೇಶನವು, ಭಾರತದಲ್ಲಿ ಯಾವತರದ ಅಂತರ್ಯುದ್ಧವೂ ಇಲ್ಲದೇ ಶಾಂತಿಯುತ ಮತ್ತು ಪ್ರಜಾಪ್ರಭುತ್ವವಾದೀ ಮಾರ್ಗಗಳಿಂದ ಸಮಾಜವಾದದ ಕಡೆಗೆ ಮುನ್ನಡೆಯಲು ಸಾಧ್ಯವಿದೆಯೆಂದು ಘೋಷಿಸಿದೆ. ಆ ಅಧಿವೇಶನವು, ಪಾರ್ಟಿಯ ರಾಜ್ಯಾಡಳಿತೆಯಲ್ಲಿ ಎಲ್ಲ ಪ್ರತಿಪಕ್ಷಗಳೂ, ದೇಶದ ಘಟನೆಗೆ ಒಳಪಟ್ಟು ನಡೆಯುವ ತನಕ, ಸಂಪೂರ್ಣ ಪ್ರಜಾಪ್ರಭುತ್ವ ಸ್ವಾತಂತ್ರ್ಯವನ್ನು ಅನುಭವಿಸುವವು ಎಂದು ಘೋಷಣೆ ಮಾಡಿದೆ. ಈ ಅಖಿಲ ಭಾರತ ಪಾರ್ಟಿ ಅಧಿವೇಶನದ ನಿರ್ಣಯದಿಂದ ಯಾವನೊಬ್ಬ ಕಮ್ಯೂನಿಸ್ಟ್ ಕೂಡ ಕದಲಲಾರನೆಂಬುದು ಸ್ಪಷ್ಟವಿದೆ.

ಕೇರಳದಲ್ಲಿ ಅಧಿಕಾರದಲ್ಲಿರುವ ನಮ್ಮ ಪಾರ್ಟಿಯು ಅನುಸರಿಸುತ್ತಿರುವ ಧೋರಣೆಗಳು ನಮ್ಮ ಪಾರ್ಟಿಯ ಉದ್ದೇಶಗಳನ್ನು ಸ್ಪಷ್ಟಗೊಳಿಸುತ್ತವೆ. ಇಲ್ಲಿ ಕಾಂಗ್ರೆಸ್ಸು ಅಧಿಕಾರದಲ್ಲಿದ್ದಾಗ ಪ್ರತಿಪಕ್ಷಗಳು ಪಡೆದಿದ್ದುದಕ್ಕಿಂತಲೂ ಇಂದು ಇಲ್ಲಿನ ಪ್ರತಿಪಕ್ಷಗಳಿಗೆ ಎಷ್ಟೋ ಹೆಚ್ಚು ಸ್ವಾತಂತ್ರವೂ ಪ್ರಜಾಪ್ರಭುತ್ವ ಹಕ್ಕುಗಳೂ ಲಭಿಸಿವೆ ಎಂಬುದನ್ನು ಯಾರು ನಿರಾಕರಿಸಬಲ್ಲರು?

ಆದುದರಿಂದ, ಇಲ್ಲಿನ ಪ್ರತಿಪಕ್ಷಗಳ ನಾಯಕರೂ ಅವರ ಅನುಯಾಯಿಗಳೂ ಹಿಂಸೆಯ ಮತ್ತು ಉದ್ರೇಕದ ದಾರಿಯನ್ನು ಬಿಟ್ಟು ಶಾಂತಿಯನ್ನು ಉಳಿಸಬೇಕು, ಕಾಯಿದೆ ಕ್ರಮಗಳನ್ನು ಪಾಲಿಸಬೇಕು ಎಂದು ಒತ್ತಾಯ ಮಾಡುವುದು, ಪಕ್ಷ ಪಂಗಡಗಳೆಂಬ ಭೇದವಿಲ್ಲದೆ, ದೇಶದ ಎಲ್ಲ ದೇಶ ಪ್ರೇಮಿಗಳ ಪವಿತ್ರ ಕರ್ತವ್ಯವಾಗಿದೆ.

ಪಾರ್ಟಿ ಘಟಕಗಳಿಗೆ ಕರೆ

ಇಂದಿನ ಚಳುವಳಿಯ ನಿಜ ಸ್ವರೂಪವನ್ನೂ ಅದರ ಹಿನ್ನೆಲೆಯಲ್ಲಿರುವ ರಾಜಕೀಯ ಜೂಜಾಟವನ್ನು ಅರಿತುಕೊಳ್ಳಲು ಕಮ್ಯೂನಿಸ್ಟ್ ಪಾರ್ಟಿಯು ಜನರನ್ನು ವಿನಂತಿ ಮಾಡುತ್ತದೆ; ಅದರ ವಿರುದ್ಧ ಬಲವಾದ ಜನಾಭಿಪ್ರಾಯವನ್ನು ಸೃಷ್ಟಿಸಲು ವಿಶಾಲವಾದ ಚಳುವಳಿ ನಡೆಸಬೇಕೆಂದು ಕೇಳಿಕೊಳ್ಳುತ್ತದೆ. ಈ ವಿಷಯಕ್ಕೆ ಜನಾಭಿಮತ ಪ್ರಕಟವಾಗುವಂತೆ ರಾಜ್ಯದ ಎಲ್ಲ ಪಾರ್ಟಿ ಘಟಕಗಳೂ ಕಾರ್ಯಕ್ರಮವಹಿಸಬೇಕೆಂದು ಪಾರ್ಟಿ ನಿರ್ದೇಶಿಸುತ್ತದೆ.

ಹೇಗಾದರೂ ಘರ್ಷಣೆಗಳನ್ನು ಹುಟ್ಟಿಸಿ ಅಶಾಂತಿ ಸೃಷ್ಟಿಸಬೇಕೆಂಬುದು ಪ್ರತಿಪಕ್ಷಗಳ ಉದ್ದೇಶವಾಗಿದೆ. ಶಾಂತಿಯನ್ನು ರಕ್ಷಿಸುವುದಕ್ಕೆ ಅತ್ಯಂತ ಸಮಾಧಾನಚಿತ್ತದಿಂದ ಕೆಲಸ ಮಾಡುವುದು, ಅದಕ್ಕೋಸ್ಕರ ತ್ಯಾಗಮಾಡುವುದು, ಉದ್ರೇಕಗೊಳಿಸುವವರನ್ನು ಪ್ರತ್ಯೇಕಗೊಳಿಸುವುದು ಇಂದಿನ ಅತ್ಯವಸರದ ಮತ್ತು ಮಹತ್ವದ ಕರ್ತವ್ಯವೆಂದು ಪಾರ್ಟಿಯು ಎಲ್ಲ ಸಜ್ಜನರಲ್ಲಿ, ಮುಖ್ಯವಾಗಿ ಪಾರ್ಟಿಯ ಸದಸ್ಯರಲ್ಲೂ ಬೆಂಬಲಿಗರಲ್ಲೂ, ವಿನಂತಿ ಮಾಡುತ್ತದೆ. ಅದಕ್ಕೋಸ್ಕರ ರಾಜಕೀಯ ವಿವರಣೆ ಮತ್ತು ಜನಮತದ ಪ್ರಕಟನೆ ನಡೆಸಬೇಕೆಂದು ಪಾರ್ಟಿ ಕೇಳಿಕೊಳ್ಳುತ್ತದೆ.

ಬಹಿರಂಗವಾಗಿಯೋ ಗುಪ್ತವಾಗಿಯೋ ಹಿಂಸೆಗೆ ತೊಡಗಿರುವವರನ್ನು ತಡೆಹಿಡಿಯಲು ಸರಕಾರ ಕೈಗೊಳ್ಳುವ ಪ್ರತಿಬಂಧಕ ಕ್ರಮಗಳಿಗೆ ಎಲ್ಲ ಸಹೃದಯರು ಬೆಂಬಲ ಕೊಡುವರೆಂದು ಪಾರ್ಟಿಗೆ ವಿಶ್ವಾಸವಿದೆ.

'ಹಿಂದೂ' ಪತ್ರಿಕಾ ಕೆಲಸಗಾರರ ಮುಷ್ಕರ !

80 ವರ್ಷಗಳ ಚರಿತ್ರೆಯಲ್ಲಿ ಪ್ರಥಮ ಪ್ರಸಂಗ

ಭಾರತದ ಪ್ರಮುಖ ಪತ್ರಿಕೆಗಳಲ್ಲೊಂದಾದ ಮದರಾಸಿನ 'ಹಿಂದೂ' ದಿನ ಪತ್ರಿಕೆ 80 ವರುಷಗಳ ತನ್ನ ಪ್ರಕಟಣೆಯ ಕಾಲಾವಧಿಯಲ್ಲಿ ಪ್ರಪ್ರಥಮ ಬಾರಿಯಾಗಿ ಕೆಲಸಗಾರರು ಮುಷ್ಕರ ನಡೆಸಿರುವುದರಿಂದ ಪ್ರಕಟಣೆಯನ್ನು ನಿಲ್ಲಿಸಬೇಕಾದ ಪ್ರಸಂಗ ನಡೆದಿದೆ.

'ಹಿಂದೂ' ಪತ್ರಿಕೆಯಲ್ಲಿ ಕಾರ್ಯ ಮಾಡುತ್ತಿರುವ ಕೆಲಸಗಾರರು ಮುಷ್ಕರ ಹೂಡಿರುವುದೇ ಇದಕ್ಕೆ ಮೂಲಕಾರಣ. ಮುಷ್ಕರದ ಕಾರಣ 'ಹಿಂದೂ' ಕಛೇರಿ ಮತ್ತು ನ್ಯಾಷನಲ್ ಪ್ರೆಸ್ ಕೆಲಸಗಾರ ಸಂಘದ ಉಪಾಧ್ಯಕ್ಷರಾದ ಶ್ರೀ ಟ. ಜಿ. ಬಾಲಸುಂದರಂ ಅವರನ್ನು ಮಾಲೀಕ ವರ್ಗದವರು "ದುಡಮೋಲು ಕಾರ್ಯಾಚರಣೆ"ಯ ಆಪಾದನೆಯನ್ನು ಹೊರಿಸಿ ಡಿಸ್‌ಮಿಸ್ ಮಾಡಿರುವುದು. ಕಾರ್ಮಿಕರ ವಕ್ತಾರರೊಬ್ಬರು 'ಹಿಂದೂ'ನಲ್ಲಿ ನಡೆದಿರುವ 'ವಿಕ್ಟಿಮೈಜೇಷನ್'-ಬಲಿತೆಗೆದುಕೊಳ್ಳುವದರ-ನಿದರ್ಶನ ಇದೂ ಒಂದು ಎಂದು ಹೇಳಿದ್ದಾರೆ. 500 ಜನ 'ಹಿಂದೂ' ಪತ್ರಿಕೆಯ ಕಾರ್ಮಿಕರನ್ನು ಪ್ರತಿನಿಧಿಸುವ ಮತ್ತು ಒಂದು ಸಹಸ್ರಜನ ಸದಸ್ಯರಿರುವ "ಹಿಂದೂ ಮತ್ತು ನ್ಯಾಷನಲ್ ಪ್ರೆಸ್ ಎಂಪ್ಲಾಯೀಸ್ ಯೂನಿಯನ್" ತನ್ನ ಉಪಾಧ್ಯಕ್ಷರನ್ನು ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಜುಲೈ 30ರ ರಾತ್ರಿ ಮುಷ್ಕರವನ್ನಾರಂಭಿಸಿತು. ಹಿಂದೂ ಕಛೇರಿಯೆದುರು ಭಾರಿ ಪಿಕೆಟಿಂಗ್ ನಡೆಯುತ್ತಿದೆ.

'ಹಿಂದೂ' ಕಾರ್ಮಿಕರ ಮುಷ್ಕರಕ್ಕೆ ಬೆಂಬಲನೀಡಲು ನಗರದ ಕಾರ್ಮಿಕ ಸಂಘಗಳು ಬಲವಾದ ಮೆರವಣಿಗೆ ನಡೆಸಿದುವು. ಇದರಲ್ಲಿ ಮದ್ರಾಸು ಪತ್ರಕರ್ತಕರ ಸಂಘವೂ ಭಾಗವಹಿಸಿತ್ತು.

ನ್ಯಾಷನಲ್ ಪ್ರೆಸ್ ಮಾಲೀಕರೂ 'ಹಿಂದೂ' ಪತ್ರಿಕೆಯ ಸಂಪಾದಕರೂ ಆದ ಶ್ರೀ ಕಸ್ತೂರಿ ಶ್ರೀನಿವಾಸನ್‌ರವರು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟಣೆಯೊಂದನ್ನು ಕೊಟ್ಟು "ಪರಿಸ್ಥಿತಿ ಹತೋಟಿಗೆ ಬಂದಬಳಿಕ ಪ್ರಕಟಣೆಯ ಕಾರ್ಯವನ್ನು ಮುಂದೊರೆಸಲಾಗುವುದು" ಎಂದು ಹೇಳಿದ್ದಾರೆ.

ಬಿಜಾಪುರ—

ಮುನಿಸಿಪಲ್ ಆಕ್ಟ್ರಾಯಿ ಕೆಲಸಗಾರರ ಓವರ್ ಟಾಯಿಮ್ ಪಗಾರ ಬೇಡಿಕೆ

ಬಿಪುಜಾರ ಮುನಿಸಿಪಾಲಿಟಿಯ ಆಕ್ಟ್ರಾಯಿ ಖಾತೆಯಲ್ಲಿ ಕೆಲಸ ಮಾಡುತ್ತಿರುವ ಕಾರಕೂನರೂ ಮತ್ತು ರಖವಾಲದಾರರೂ, ಕನಿಷ್ಟ ಕೂಲಿವೇತನ ಕಾಯಿದೆ ಪ್ರಕಾರ ತಮಗೆ 1955ರಿಂದ ಓವರ್‌ಟಾಯಿಮ್ ಅಲಾವನ್ಸ ಕೊಡಬೇಕೆಂದು ಕಳೆದ ಎರಡು ವರ್ಷಗಳಿಂದ ಕೇಳುತ್ತ ಬಂದಿದ್ದರೂ ಕೂಡ, ಮುನಿಸಿಪಾಲಿಟಿಯವರು, ಅವರ ಬೇಡಿಕೆಯನ್ನು ಕೊಡಲು ಮುಂದೆ ಬಾರದ್ದರಿಂದ, ಈ ನೌಕರದಾರರು ಮುನಿಸಿಪಾಲಿಟಿ ವಿರುದ್ಧ ಕೋರ್ಟಿನಲ್ಲಿ ದಾವೆ ಮಾಡಿದ್ದಾರೆ. ಮುನಿಸಿಪಾಲಿಟಿಯಿಂದ ಇವರಿಗೆ ಎರಡು ಲಕ್ಷ ರೂಪಾಯಿ ಓವರ್ ಟಾಯಿಮ್ ಅಲಾವನ್ಸ್ ಸಿಗಬೇಕಾಗಿದೆ. ಹೋದ ವರ್ಷ ಶ್ರೀಮತಿ ಸುಶೀಲಾಬಾಯಿ ಕೊಡೆಕಲ ಇವರು ಅಧ್ಯಕ್ಷರಾಗಿದ್ದಾಗ, ಓವರ್‌ಟಾಯಿಮ್ ರಿಜಿಸ್ಟರ ಸರಿಯಾಗಿಟ್ಟು ನೌಕರದಾರರಿಗೆ ಅಲಾವನ್ಸ್ ಕೊಡಬೇಕೆಂದು ಹೋದ ವರ್ಷ ಚೇಫ್ ಆಫೀಸರರಿಗೆ ಆದೇಶವಿತ್ತಿದ್ದರೂ ಕೂಡ, ಅವರು ಯಾವದೇ ಕ್ರಮತೆಗೆದುಕೊಳ್ಳಲಿಲ್ಲ. ಚೀಫ್ ಆಫೀಸರರ ಈ ಅಲಕ್ಷ್ಯತನ ಖಂಡನೀಯವಾಗಿದೆ.

ಅಕ್ಟ್ರಾಯಿ ನೌಕರದಾರರಿಗೆ ನ್ಯಾಯವಾಗಿ ಸಿಗಬೇಕಾದ ಓವರ್‌ಟಾಯಿಮ್ ಅಲಾವನ್ಸ್ ಸಿಗಲೇಬೇಕೆಂದು ಮುನ್ಸಿಪಲ್ ಕೆಲಸಗಾರ ಸಂಘವೂ, ಕಮ್ಯೂನಿಸ್ಟ್ ಪಾರ್ಟಿಯೂ, ಮುನಿಸಿಪಾಲಿಟಿಗೆ ಕೇಳಿಕೊಂಡಿದೆ.

ನೀವೇನು ಹೇಳುತ್ತೀರಿ ?

(೪ನೇ ಪುಟದಿಂದ)

ರೂಪಾಯಿಗಳಿರಬೇಕು. ಪುನರ್ವಿಮರ್ಶಿತ ಅಂದಾಜಿನಲ್ಲಿ ಈ ಅಂಕಿಯನ್ನು 9 ಲಕ್ಷಕ್ಕಿಳಿಸಲಾಯಿತು. ಫೆಬ್ರುವರಿ ವರೆಗೆ ಇರುವ ಜಮಾ ಒಟ್ಟು 4·52 ಲಕ್ಷ ರೂಪಾಯಿ. ಮಾರ್ಚಿ ತಿಂಗಳದ್ದು ಒಂದು ಲಕ್ಷ ರೂಪಾಯಿ ಎಂದು ಸೇರಿಸಿದರೂ ಪುನರ್ವಿಮರ್ಶಿತ ಅಂಕಿಗೂ ಅದಕ್ಕೂ ಇರುವ ವ್ಯತ್ಯಾಸ 1½ ಲಕ್ಷ ರೂ. ಮತ್ತು ಬಡ್ಜೆಟ್ ಅಂಕಿಯಿಂದ 5½ ಲಕ್ಷ ರೂ. ಇರುತ್ತದೆ. 1957—58ರಲ್ಲಿ ಈ ಆರ್ಗನೈಜೇಷನ್ ಮೇಲಾದ ಬಡ್ಜೆಟ್ ಖರ್ಚು 9·30 ಲಕ್ಷ ರೂಪಾಯಿ. ಇಳಿಮರಿ (ಡಿಪ್ರೆಷನ್) ಮುಂತಾದುವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೂ ನಷ್ಟದ ಹಣ 3½ ಲಕ್ಷ ರೂಪಾಯಿ. ಪ್ರಸಕ್ತ ವರುಷಕ್ಕೆ ಜಮಾದ ಅಂಕಿಗಳು 5·25 ಲಕ್ಷ ರೂಪಾಯಿಗಳಿದ್ದರೆ ಖರ್ಚಿನ ಬಾಬ್ತು ಅಂಕಿ 9 ಲಕ್ಷ ರೂಪಾಯಿ ಇದೆ.

ಈ ಆರ್ಗನೈಜೇಷನ್ ರಾಜ್ಯ ಸರಕಾರದ ಆದಾಯದಲ್ಲಿ ಒಂದು ಖಾಯಂ ನಷ್ಟದ ಬಾಬಾಗಿದ್ದು ಇನ್ನಾವ ವಿಳಂಬವಿಲ್ಲದೆ ಇದು ತೊಲಗಿಸಲ್ಪಡಬೇಕು.

ಈ ಒಂದು ಸಂಗತಿ ವ್ಯವಸಾಯದ ವ್ಯವಸ್ಥೆಯನ್ನೇ ಸಂಪೂರ್ಣ ಪರಿಶೀಲನೆಗೆ ಗುರಿಮಾಡಬೇಕೆಂದು ತೋರಿಸುತ್ತದೆ."

೦ ೦ ೦

ಹಾಗಾದರೆ ಮೇಲ್ಕಾಣಿಸಿದ 5·25 ಲಕ್ಷ ರೂ. ಮತ್ತು 9 ಲಕ್ಷ ರೂ. ಗಳಲ್ಲಿರುವ 4·75 ಲಕ್ಷ ರೂಪಾಯಿಗಳ ನಷ್ಟ ಹೇಗಾಗುತ್ತಿದೆ? ಎಲ್ಲಿಗೆ ಹೋಗುತ್ತಿದೆ? ಎಲ್ಲಿ ಸೋರುತ್ತಿದೆ?

ರೈತ ಕುಲದ ಸಂಘಟನೆ—ಸಭೆ

ಬೈರಂಪಳ್ಳಿ: ಉಡುಪಿ ತಾಲ್ಲೂಕು ರೈತ ಸಂಘಕ್ಕೆ ಬೈರಂಪಳ್ಳಿ ಗ್ರಾಮದ ರೈತರಿಂದ ಬಂದಿದ್ದ ಅರ್ಜಿಗಳನ್ನು ತಾಲ್ಲೂಕು ರೈತ ಸಂಘದ ಜತೆಕಾರ್ಯದರ್ಶಿ ಬಾಳಗಟ್ಟೆ ರಾಮಚಂದ್ರ ಭಟ್ಟರು 26-7-'58 ರಂದು ಇಲ್ಲಿ ಪರಿಶೀಲಿಸಿದರು. ಕೊರಗ ಸೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು.

ಮಳೆ—ನೆರೆ ಹಾವಳಿಯಿಂದಾದ ನಷ್ಟಗಳ ಬಗ್ಗೆ, ಚಾಲ್ತಿ ವರುಷದ ಬಗ್ಗೆ ಗೇಣಿ ರಿಯಾಯಿತಿ ದೊರೆಯುವಂತೆ ರೈತ ಸಂಘವು ಪ್ರಯತ್ನಿಸುವುದಾಗಿ ಆಶ್ವಾಸನೆ ದೊರೆಯಿತಲ್ಲದೆ ಗೇಣಿ ಕೊಟ್ಟದ್ದಕ್ಕೆ ರಶೀದಿ ಕೊಡದೆ ಭೂಮಾಲಿಕರು ನಡೆಸಿರುವ ಕುತಂತ್ರದ ಬಗ್ಗೆ ಹೋರಾಡುವದಾಗಿ ಹೇಳಿದರು. ಭೂಶಾಸನಕ್ಕೆ ಒತ್ತಾಯ ಹಾಕಲಾಯಿತು.

ಉಪ್ಪೂರು: ಉಪ್ಪೂರು ಗ್ರಾಮದ ರೈತ ಸಭೆಯು ಪಿ. ಪೊಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ನೆರೆಯ ಹಾವಳಿಯಿಂದ ರೈತರಿಗಾದ ನಷ್ಟಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲು ಸಹಿಸಂಗ್ರಹಣೆ ಮಾಡಬೇಕೆಂದು ತೀರ್ಮಾನಿಸಲಾಯಿತು.

ಉಪ್ಪೂರು ಗ್ರಾಮ ಸಮಿತಿಗೆ ಪಿ. ಪೊಮ್ಮಯ್ಯನವರನ್ನು ಅಧ್ಯಕ್ಷರನ್ನಾಗಿಯೂ ಗೋಪಾಲ ಸೇರ್ವೆಗಾರರನ್ನು ಕಾರ್ಯದರ್ಶಿ ಮತ್ತು ಜೊತೆಕಾರ್ಯದರ್ಶಿ ಎಂದು ದುಗ್ಗಪ್ಪನವರನ್ನೂ ಚುನಾಯಿಲಾಯಿತು.

ಹೊಳೆಹನಸವಾಡಿ: ಶಿವಮೊಗ್ಗ ತಾಲ್ಲೂಕು ಹೊಳೆಹನಸವಾಡಿ ರೈತ ಸಂಘದ ಸಭೆ ಶ್ರೀ ಮಠದ ಶಿವಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಗೆ ಶಿವಮೊಗ್ಗದ ನ್ಯಾಯವಾದಿ ಶ್ರೀ ಬಿ. ಎಲ್. ಎ. ಹೆಗ್ಗಡೆ ಮತ್ತು ತಾಲ್ಲೋಕು ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಎಂ. ಸಿ. ಸದಾಶಿವಪ್ಪ ಆಗಮಿಸಿದ್ದರು.

ಈ ಗ್ರಾಮಸ್ಥರು ಕೆಲವು ಕಾರಣಗಳಿಂದ ಈ ಗ್ರಾಮದಿಂದ ಹೊರಟುಹೋಗಬೇಕೆಂದು ತೀರ್ಮಾನಿಸಿ ೨೦ ವರುಷಗಳಾದರೂ ಸರ್ಕಾರ ತಾನು ಕೊಟ್ಟ ಭರವಸೆಯ ಪ್ರಕಾರ ಯಾವ ನೆರವನ್ನೂ ನೀಡದಿರುವುದನ್ನು ಖಂಡಿಸಲಾಯಿತಲ್ಲದೆ, ಗ್ರಾಮದ ಬಹುಸಂಖ್ಯಾತರಿಗೆ ಈಗ ತ್ಯಜಿಸಲು ಇಷ್ಟವಿಲ್ಲದ್ದರಿಂದ ಹೋಗುವದು ಸರಿಯಲ್ಲವೆಂದೂ ಇಂದಿನವರೆಗೂ ಸರಕಾರ ಯಾವ ಅಭಿವೃದ್ಧಿಗಳನ್ನು ಈ ಗ್ರಾಮಕ್ಕೆ ಕೊಡದಿರುವುದನ್ನು ಖಂಡಿಸಬೇಕೆಂದೂ ತೀರ್ಮಾನಿಸಲಾಯಿತು.

ಹಳಗಾ: ಕಾರವಾರ ತಾಲೂಕಿನ ಮೂರುನೂರು ರೈತರ ಮಹಾಸಭೆಯು ಹಳಗಾ ನಾರಾಯಣ ದೇವಸ್ಥಾನದಲ್ಲಿ ನಡೆಯಿತು. ಬಿ. ಪಿ. ಕದಮ್ ಅವರು ಅಧ್ಯಕ್ಷತೆ ವಹಿಸಿದ್ದರು.

ಕಾರವಾರ ತಾಲೂಕಿನ ಪ್ರತಿಯೊಂದು ಹಳ್ಳಿಯಲ್ಲೂ ವಿಪರೀತ ಮಳೆಯಿಂದ ಬೆಳೆಯೆಲ್ಲ ಕೊಳೆತು ಭಾರೀ ನಷ್ಟವಾಗಿ ರೈತರ ಸ್ಥಿತಿ ಚಿಂತಾಜನಕವಾಗಿರುವದರಿಂದ ಈ ಕೆಳಗಿನ ಬೇಡಿಕೆಗಳನ್ನು ಸರಕಾರವು ಪರಿಶೀಲಿಸಬೇಕೆಂದು ಒತ್ತಾಯ ಮಾಡಲಾಯಿತು.

(1) ಪೀಡಿತರಿಗೆ ಕೂಡಲೆ ಸರ್ಕಾರವು ಬೀಜಗಳನ್ನು ಪೂರೈಸಬೇಕು, ಇಲ್ಲವೆ ಅದಕ್ಕಾಗಿ ಧನಸಹಾಯ ನೀಡಬೇಕು. (2) ರೈತರ ಜೀವನ ನಿರ್ವಹಣೆ ಕಷ್ಟಕರವಾಗಿರುವದರಿಂದ ಆರ್ಥಿಕ ಸಹಾಯ ನೀಡಬೇಕು. (3) ತೀರ್ವೆಯನ್ನು ಸಂಪೂರ್ಣ ಮಾಫಿ ಮಾಡಬೇಕು. (4) ಪೀಡಿತ ಗ್ರಾಮಗಳನ್ನೆಲ್ಲ ಬರಗಾಲ ಪ್ರದೇಶವೆಂದು ಸಾರಿ ಬರಗಾಲ ಪರಿಹಾರ ಕಾಮಗಿರಿಗಳನ್ನಾರಂಭಿಸಬೇಕು. (5) ಅಗ್ಗದರದ ಅಕ್ಕಿ ಅಂಗಡಿಗಳನ್ನು ತೆರೆಯಬೇಕು.

ಇದೇ ಸಭೆಯಲ್ಲಿ ಮಧ್ಯಪ್ರಾಚ್ಯದಲ್ಲಿ ನಡೆದ ಸಾಮ್ರಾಜ್ಯಶಾಹಿಗಳ ದುರಾಕ್ರಮಣವನ್ನು ಖಂಡಿಸಲಾಯಿತು.

ದೊಡ್ಡಬೆಳವಂಗಳದಲ್ಲಿ ಪೋಲೀಸ್ ವರ್ತನೆಗಳು

ತಾ॥ 31—7—58ರಂದು ಹುಲ್ಕುಂಟೆ ಗ್ರಾಮಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕು ಬೆಳವಂಗಳದ ರೇಂಜ್ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಹುಲ್ಕುಂಟೆ ಗ್ರಾಮಕ್ಕೆ ಜಮೀನ್ದಾರರೊಬ್ಬರ ಅಮಂತ್ರಣದ ಮೇರೆಗೆ ಆಯುಧಪಾಣಿಗಳಾಗಿ ಒಬ್ಬ ದಫೇದಾರ್, ನಾಲ್ಕು ಜನ ಕಾನ್ಸ್‌ಟೇಬಲುಗಳೊಡನೆ ಆಗಮಿಸಿ ಜಮೀನಿದಾರರು ಕೊಟ್ಟಿದ್ದ ಪಟ್ಟಿಯಲ್ಲಿ ಕಂಡ ರೈತರ ಮೇಲೆಲ್ಲಾ ಹುಚ್ಚಾಬಟ್ಟೆ ಕೂಗಾಡಿದರು. "ಗೋವಿಂದವಂತೆ, ಗೋಮಾಳ. ಹೋಗಿ ನೇಗಿಲು ಕಟ್ಟಿ ಉಳುಮೆ ಮಾಡಿ ಯಾವೋನು ಬರ್ತಾನೋ ತಡೆಯೋಕೆ ಹೂತು ಬಿಡ್ತೀನಿ" ಎಂದು ಕೂಗಾಡಿದರು. ಇವರೀ ಪುಂಡತನದ ವರ್ತನೆಗೆ ಉದ್ರೇಕಗೊಂಡ ಗ್ರಾಮದ ರೈತರು, ಹೆಂಗಸರು ಆದಿಯಾಗಿ ಇವರು ಕಟ್ಟಿಸಿದ ನೇಗಿಲುಗಳನ್ನು ತಡೆದುಬಿಟ್ಟರು. ಹುಲ್ಕುಂಟೆ ಚೇರ್ಮನ್ ಮರಿಯಪ್ಪ, ರಂಗಪ್ಪ, ಮತ್ತು ಶ್ರೀಕಂಠಾಚಾರ್ಯ ಇವರುಗಳು ಸಾಹೇಬರು ಕಟ್ಟಿಸಿದ್ದ ನೇಗಿಲುಗಳ ಮುಂದೆ ಕುಳಿತುಬಿಟ್ಟರು.

ಆಮೇಲೆ ಬೇಕಾದಷ್ಟು ಗಲಾಟೆಯಾಗಿ ಹೇಳಿಕೆಗಳನ್ನು ತೆಗೆದುಕೊಂಡು ಬಿಟ್ಟುಬಿಟ್ಟರು. ಹೀಗೆ ಪೋಲೀಸರೇ ಪುಂಡತನಕ್ಕಿಳಿದರೆ ಗತಿಯೇನು?

ಇ. ನಾರಾಯಣಪ್ಪ
ದೊಡ್ಡಬಳ್ಳಾಪುರ

ಹೆಚ್ಚುವರಿ ತೆರಿಗೆಯ ಖಂಡನೆ

ಚಿತ್ರದುರ್ಗ: ತಾ. ೨೦-೭-'೫೮ ರಂದು ಚಿತ್ರದುರ್ಗ ಕಮ್ಯೂನಿಸ್ಟ್ ಪಾರ್ಟಿ ಶಾಖೆಯ ಸಭೆಯ ಕಾರ್ಯಕಾರಿ ಸಮಿತಿಯ ಸಭೆ ದಾವಣಗೆರೆಯಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಕಾ॥ ತಿಮ್ಮಣ್ಣನವರು ವಹಿಸಿದ್ದರು.

● ವಾಣೀವಿಲಾಸ ಸಾಗರದ ಅಚ್ಚುಕಟ್ಟಿನ ರೈತರ ಮೇಲೆ ವಿಧಿಸಲಾಗಿರುವ ಹೆಚ್ಚುವರಿ "ನೀರಿನ ತೆರಿಗೆ" ಖಂಡನೀಯವಾಗಿದೆ.

● ಅಲ್ಪಾವಧಿಯ ಸಾಲಗಳ ಕೊಡುಗೆಯು ತೀರಾ ಮಂದಗತಿಯಿಂದ ಕೂಡಿರುವದರಿಂದ ರೈತರಿಗೆ ಪ್ರಯೋಜನವಿಲ್ಲದಾಗಿದೆ, ಈ ಸಾಲ ಸುಲಭವಾಗಿ ತ್ವರಿತವಾಗಿ ಸಿಕ್ಕಬೇಕು.

● ಮೈಸೂರು ಸರ್ಕಾರ ಪ್ರಗತಿಪರವಾದ ಭೂಶಾಸನವನ್ನು ತರಲು ವಿಳಂಬ ಮಾಡುತ್ತಿರುವುದು ಖಂಡನೀಯ. ಗೇಣಿದಾರರ ಉಚ್ಚಾಟನೆಯನ್ನು ತಡೆಗಟ್ಟಲು ಜರೂರು ಶಾಸನ ತರಬೇಕು ಎಂಬ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

ಬಾಣಾವರದ ಅಧ್ಯಕ್ಷರು

ಅರಸಿಕೆರೆ ತಾಲೂಕು ಬಾಣಾವರದ ಪುರಸಭೆಯ ಅಧ್ಯಕ್ಷರು ಇಲ್ಲಿಗೆ ಬರುವ ಪೋಲೀಸು ಅಧಿಕಾರಿಗಳನ್ನು ಸರಿಗಟ್ಟಿಕೊಳ್ಳುತ್ತಾರೆ. ಈ ಪೋಲೀಸ್ ಅಧಿಕಾರಿಗಳು ಠಾಣೆಗೆ ಬಂದ ಫಿರ್ಯಾದನ್ನು ಸದರಿ ಅಧ್ಯಕ್ಷರ ಕಡೆಗೆ ಕಳುಹಿಸುತ್ತಾರೆ. ಇಬ್ಬರೂ ಮಾಮೂಲು ಪಡೆದು ಖಾಜೀ ನ್ಯಾಯ ಮಾಡುತ್ತಾರೆ. ಈ ಅಧ್ಯಕ್ಷರು "ನನಗೆಲ್ಲಾ ಮಂತ್ರಿಗಳು ಗೊತ್ತು ಏನುಬೇಕಾದ್ದನ್ನು ಮಾಡಬಲ್ಲೆ, ಮಾಡಿಕೊಡಬಲ್ಲೆ" ಎಂದು ಬಡಾಯಿಕೊಚ್ಚುತ್ತಾರೆ. ಅಷ್ಟೇ

ಲಂಚ—ಹಿಂಸೆ

ಅಲ್ಲ ಅವರಿಗಾರಾದರೂ ವಿರೋಧವಾಗಿ ನಡೆದುಕೊಂಡರೆ, ಮಾತನಾಡಿದರೆ ಪೋಲೀಸಿನವರಿಗೆ ಹೇಳಿ ಹಿಂಸೆ ಕೊಡಿಸುತ್ತಾರೆ, ಪಾದರಕ್ಷೆಯಿಂದ ಹೊಡೆಸಲೂ ಹಿಂಜರಿಯುವುದಿಲ್ಲ. ಸರಕಾರ ಇಂಥವರನ್ನು ತರಾಟೆಗೆ ತೆಗೆದುಕೊಳ್ಳಲಾರದೆ?

ಕೆ. ಬಿ. ಹುಚ್ಚಪ್ಪ
ಹಳೇಬೀಡು

ಬಾಗಲಕೋಟೆ ಹಾಸ್ಟೆಲಿನಲ್ಲಿ ಹಿಂದುಳಿದವರಿಗೆ ಹಿಂಸೆ

ಬಾಗಲಕೋಟೆಯಲ್ಲಿರುವ ಹಿಂದುಳಿದ ಜಾತೀಯ ವಿದ್ಯಾರ್ಥಿಗಳ ಹಾಸ್ಟಲಿಗೆ ಕೇಂದ್ರ ಸರ್ಕಾರದಿಂದಲೂ ಮೈಸೂರು ಸರ್ಕಾರದಿಂದಲೂ ಹೇರಳವಾಗಿ ಹಣ ಸಿಕ್ಕುತ್ತಿದ್ದರೂ ಇಲ್ಲಿ ವಾಸಿಸುವ ಹಿಂದುಳಿದ ಜಾತಿಯ ವಿದ್ಯಾರ್ಥಿಗಳಿಗೆ ತೀರಾ ಹೊಲಸು ಆಹಾರ ಬಡಿಸುತ್ತಾರಷ್ಟೇ ಅಲ್ಲ, ವಾರದಲ್ಲಿ ಒಂದೆರಡು ದಿನ ಏಕಾದಶಿ ಮಾಡ ಹಚ್ಚುತ್ತಾರೆ. ವಿದ್ಯಾರ್ಥಿಗಳು ಈ ಬಗ್ಗೆ ತಕರಾರು ಮಾಡಿದರೆ ಈ ಹಾಸ್ಟೆಲಿನ ವ್ಯವಸ್ಥಾಪಕರಾಗಿರುವ ಕಾಂಗ್ರೆಸ್ ಎಂ. ಎಲ್. ಎ ಗಳೊಬ್ಬರು ತಿರುಗಿ ವಿದ್ಯಾರ್ಥಿಗಳನ್ನೇ ಬೆದರಿಸುತ್ತಾರಲ್ಲದೆ ಅವರ ಪಾಲಕರಿಗೂ ಎಚ್ಚರಿಕೆ ಕೊಡುತ್ತಾರೆ.

ಸಂಬಂಧಿಸಿದ ಮಂತ್ರಿವರ್ಯರು ಸ್ವಲ್ಪ ಲಕ್ಷ್ಯ ಕೊಡುವರೆ?

ನೊಂದ ಬಡವಿದ್ಯಾರ್ಥಿ
ಬಾಗಲಕೋಟೆ

ಇವರೇನು ಡಾಕ್ಟರರೆ?

ಪಾಚ್ಛಾಪುರದ ಡಾಕ್ಟರ್ ಪಾಟೀಲರು ಎಂದಿನಂತೆ ತಮ್ಮ ಚಿಕಿತ್ಸಾ ಪರಾಕ್ರಮವನ್ನು ಮುಂದೊರೆಸಿರುತ್ತಾರೆ. ಹುಕ್ಕೇರಿ ತಾಲೂಕು ಪೈಕಿ ಪರಕನಕಟ್ಟಿಯಲ್ಲಿ ಇನ್ನೊಬ್ಬ ಸ್ತ್ರೀಯಳು ಸದರೀ ಡಾಕ್ಟರರಿಂದ ಬಾಣಂತಿತನದ ಉಪಚಾರ ಹೊಂದುತ್ತಿರುವಾಗ ಮರಣ ಹೊಂದಿರುತ್ತಾಳೆ. ಇಂಥ ತಕರಾರುಗಳು ಇನ್ನಿತರ ಕಡೆಯಿಂದಲೂ ಬಂದಿವೆ. ಇವರಿಗೇನು ವೈದ್ಯಕೀಯ ವೃತ್ತಿ ಸರಿಯಾಗಿ ತಿಳಿಯದೊ? ಅಥವಾ ಇವರ ದುರ್ಲಕ್ಷ್ಯತನಕ್ಕೆ ಇನ್ನೇನಾದ ದುಡ್ಡಿನ ಕಾರಣಗಳಿವೆಯೊ? ಯಾರಾದರೂ ಪರಿಶೀಲಿಸಬಾರದೇ? ಮಾನವ ಜೀವಿಗಳನ್ನು ಬದುಕಿಸಬಾರದೇ?

—ಮಾನವಪ್ರೇಮಿ, ಪಾಚ್ಛಾಪುರ.

ಅತಿವೃಷ್ಟಿಯಿಂದ ರೈತರು ಸಂಕಟದಲ್ಲಿದ್ದಾರೆ, ಸರಕಾರ ಪರಿಹಾರ ನೀಡಬೇಕು

ಹಾಸನ ರೈತರಲ್ಲಿ ಸಹಕಾರ ಕೋರಿಕೆ

ಹಾಸನ ಜಿಲ್ಲೆಯ ರೈತ ಸಂಘವು ಲಂಚಕೋರ ಅಧಿಕಾರಿಗಳ, ಪೂಟ್‌ಲಾಯರುಗಳ, ಪುಂಡುಪೋಕರಿಗಳ ಪೀಡೆಯನ್ನು ತಪ್ಪಿಸಿ ರೈತರ ಕುಂದುಕೊರತೆಗಳ ನಿವಾರಣೆಗೆ ಪ್ರಯತ್ನಿಸುತ್ತಿರುವದರಿಂದ ಪೋಲೀಸಿನವರು ಸುಳ್ಳು ಕೇಸುಗಳನ್ನು ಹಾಕಲು ಪ್ರಯತ್ನ ನಡೆಸಿರುವುದರಿಂದ ರೈತಾಪಿ ವರ್ಗ ಎಚ್ಚರಾಗಿ ಸಂಘದ ಬೆಂಬಲಕ್ಕೆ ನಿಲ್ಲಬೇಕೆಂದು ಸಂಚಾಲಕರು ಮನವಿ ಮಾಡಿಕೊಳ್ಳುತ್ತಾರೆ.

ಮಂಗಳೂರು ಜಿಲ್ಲೆಯಲ್ಲಿ—

ಅಗ್ಗದರದ ಅಕ್ಕಿಯಂಗಡಿಗಳನ್ನು ತೆರೆಯುವಂತೆ ಒತ್ತಾಯಿಸುವ ಚಳುವಳಿ

ಜಿಲ್ಲೆಯಲ್ಲಿ ಅಕ್ಕಿಯ ಬೆಲೆ ವಿಪರೀತ ಏರಿದುದರಿಂದ ಅದನ್ನು ತಡೆಗಟ್ಟಬೇಕೆಂದೂ ಜಿಲ್ಲೆಯಾದ್ಯಂತ ಅಗ್ಗದರದ ಅಕ್ಕಿಯಂಗಡಿಗಳನ್ನು ತೆರೆಯಬೇಕೆಂದೂ ಸರಕಾರವನ್ನು ಒತ್ತಾಯಿಸುವ ಚಳವಳಿ ಇದೀಗ ಜಿಲ್ಲೆಯಲ್ಲಿ ನಡೆಯುತ್ತಿದೆ. ಕಮ್ಯೂನಿಸ್ಟ್ ಪಾರ್ಟಿಯ ವಿವಿಧ ಶಾಖೆಗಳು ಈ ವಿಷಯದಲ್ಲಿ ಮುಖ್ಯ ಮಂತ್ರಿಯವರಿಗೆ ತಂತಿಗಳದ್ನು ಕಳುಹಿಸುತ್ತಿವೆ. ಇತ್ತೀಚೆಗೆ ಜರಗಿದ ಪಾಣೆಮಂಗಳೂರು, ಉಡುಪಿ, ಕೋಟೆಕಾರ್, ಮಂಗಳೂರು ಸರ್ಕಲ್, ಮಂಗಳೂರು ನಗರ ಈ ವಿಭಾಗಗಳ ಬೀಡಿ ಮಜೂರರ ಪ್ರತಿನಿಧಿ ಸಭೆಗಳು ಸರಕಾರವನ್ನು ಈ ಬಗೆಗೆ ಒತ್ತಾಯಿಸಿವೆ. ಬೋಳಾರದ ಗ್ರಾಮ ಸುಧಾರಕ ಸಂಘ, ಉಳ್ಳಾಲದ ಗ್ರಾಮ ಸೇವಾ ಸಂಘಗಳಂತಹ ಸಂಸ್ಥೆಗಳೂ ಸರಕಾರವನ್ನು ವಿನಂತಿಸಿವೆ. ಜಪ್ಪು, ಕಂಕನಾಡಿಗಳ ಮಂಡಲ ಕಾಂಗ್ರೆಸ್‌ಗಳು ಕೂಡ ಸರಕಾರಕ್ಕೆ ತಂತಿ ಕಳಿಸಿವೆ ಎಂದು ವರದಿಯಾಗಿದೆ. ಮಜೂರರ ಸಂಘಟನೆಗಳೂ, ಹಲವು ಕಾರ್ಖಾನೆಗಳಿಂದ ಪ್ರತ್ಯೇಕವಾಗಿ ಮಜೂರರೂ

(೮ನೇ ಪುಟ ನೋಡಿ)

ಅನ್ಯಾಯಕ್ಕೆದಿರಾಗಿ ಕಾರ್ಮಿಕ ವರ್ಗದ ಸಂಘಟನೆ ಬೆಳೆಯುತ್ತಿದೆ

ಸಂಪಾದಕರಿಗೆ ಪತ್ರಗಳು

ಕಾಶೀ ವಿಶ್ವೇಶ್ವರನ ಮುಂದೆ ಕುಷ್ಟರೋಗಿಗಳ ಹಾವಳಿ

ಬೆಂಗಳೂರಿನ, ಬಳೇಪೇಟೆ–ಚಿಕ್ಕಪೇಟೆ ಚೌಕದ ಬಳಿಯಿರುವ ಕಾಶೀ ವಿಶ್ವೇಶ್ವರನ ಸನ್ನಿಧಿಯಲ್ಲಿ ಯಾವಾಗ ನೋಡಿದರೂ ಕುಷ್ಟ ಮತ್ತು ತೊನ್ನು ರೋಗಿಗಳ ತಂಡೋಪತಂಡಗಳೇ ಸೇರಿರುತ್ತವೆ. ವಿಶ್ವೇಶ್ವರನ (ದೇವಸ್ಥಾನದ) ಮುಂಭಾಗದಲ್ಲೇ ಜಟ್ಕಾ ಗಾಡಿ ಚೌಕ. ಈ ಹಾದಿಯಲ್ಲಿ ನಡೆಯುವಾಗ ಜನಗಳು ಮೂಗಿಗೆ ಕೈಹಿಡಿದುಕೊಂಡೇ ಹೋಗಬೇಕಾಗಿದೆ. ಯಾಕೆಂದರೆ, ಒಂದೆಡೆಯಿಂದ, ಅಂಟು ಜಾಡ್ಯ ಹಿಡಿದ, ತೊನ್ನು, ಕುಷ್ಟ ರೋಗಿಗಳ ತಂಡ, ದೇವಸ್ಥಾನದ ಮುಂಭಾಗದ ಕಾಲುದಾರಿಯಲ್ಲಿ ಕೂತಿರುವುದು. ಇನ್ನೊಂದೆ ಗಾಡಿ ಚೌಕದಲ್ಲಿರುವ ಕುದುರೆಗಳ ಲದ್ದಿಯ ಮತ್ತು ಮೂತ್ರದ ವಾಸನೆ. ಇಂಥದರಲ್ಲಿ ಮಾಡುವುದೇನು? ಆರೋಗ್ಯದ ಮಾತಂತೂ ದೂರ ಉಳಿಯಿತು.

ಬೆಂಗಳೂರು ಬಹಳ ದೊಡ್ಡ ನಗರ, ಸುಂದರ ನಗರ, ಇಷ್ಟು ದೊಡ್ಡ ನಗರದ ಮುನಿಸಿಪಾಲಿಟಿಯ ಆರೋಗ್ಯ ಖಾತೆ ನಿದ್ದೆ ಮಾಡುತ್ತಿದೆಯೇ? ಎಂದು ನಾಗರಿಕರು ಪ್ರಶ್ನಿಸುತ್ತಿದ್ದಾರೆ.

ಜನರಿಂದ ಓಟು ಪಡೆದು ಸೀಟು ಸಿಕ್ಕಿದ ಮೇಲೆ ಅವರೆಲ್ಲೋ ನಾವೆಲ್ಲೋ ಆಗುತ್ತೇವೆ.

ಕಾರ್ಪೊರೇಶನ್ ಕೌನ್ಸಿಲರುಗಳೂ, ಆರೋಗ್ಯ ಇಲಾಖೆಯವರೂ ಈ ಕಡೆಗೆ ಗಮನ ಕೊಡುವರಾಗಿ ನಂಬಿರುವೆನು.

"ಓರ್ವ ನಾಗರಿಕ"

ಉಪಾಧ್ಯಾಯರಿಲ್ಲದ ಶಾಲೆ ಇಲ್ಲಿದೆ

ಕೋಲಾರ ಜಿಲ್ಲಾ ಬಾಗೇಪಲ್ಲಿ ತಾಲ್ಲೂಕು ಗೂಳೂರು ಹೋಬಳಿ ಚಿನ್ನಕಾಯಿಲಪಲ್ಲಿ ಪ್ರೈಮರಿ ಸ್ಕೂಲಿನಲ್ಲಿ ಉಪಾಧ್ಯಾಯರು ಒಂದು ತಿಂಗಳಿಂದಲೂ ಇಲ್ಲ. ಓದುವ ಬಾಲಕರಿಗೆ ತುಂಬಾ ತೊಂದರೆಯಾಗಿದೆ. ಸಂಬಂಧಪಟ್ಟ ತಾಲ್ಲೂಕು ಅಧಿಕಾರಿಗಳಿಗೆ ನಾವು ಹೇಳಿದರೆ ನಾನೇನು ಮಾಡಬೇಕಂತ ಹೇಳುತ್ತಾರೆ. ಸಂಬಂಧಪಟ್ಟ ಆಧಿಕಾರಿಗಳು ಸ್ಕೂಲುಗಳು ಏನಾಗುತ್ತಿವೆಂತ ಕೂಡಾ ನೋಡುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಮೇಲಧಿಕಾರಿಗಳು ಬೇಗನೆ ಉಪಾಧ್ಯಾಯರನ್ನು ಕಳುಹಿಸುವ ಹಾಗೆ ಮಾಡುತ್ತಾರೆಂದು ಪ್ರಾರ್ಥನೆ.

ಎಂ. ಪಿ. ಆದಿನಾರಾಯಣ ರೆಡ್ಡಿ,
ಗೂಳೂರು.

ಎ. ಓ. ಗಳು ಇಲ್ಲಿಲ್ಲ !

ಬಿಜಾಪುರ ಮುನಿಸಿಪಾಲಿಟಿಯ ಸ್ಕೂಲ ಬೋರ್ಡಿನ ಶಿಕ್ಷಣ ಅಧಿಕಾರಿಗಳಿಗೆ (ಎ. ಓ.) ಬದ್ಲಿಯಾಗಿ 9 ತಿಂಗಳಾಗುತ್ತ ಬಂತು. ಅವರ ಜಾಗದಲ್ಲಿ ಒಬ್ಬ ಬೀಟ್ ಆಫೀಸರರನ್ನು ಬದ್ಲಿ ನೇಮಿಸಲಾಗಿದೆ. ಇವರಿಗೆ ತಮ್ಮ ಕೆಲಸವನ್ನೂ ಮತ್ತು ಮುನಿಸಿಪಲ್ ಸ್ಕೂಲ್ ಬೋರ್ಡಿನ ಕೆಲಸವನ್ನೂ ನೋಡಿಕೊಳ್ಳುವುದು ಅಸಾಧ್ಯವಾಗಿದೆ.

ಶಿಕ್ಷಣ ಖಾತೆಯಲ್ಲಿ ನಿಷ್ಠಾವಂತ ಸೇವಕರಾದ ಶ್ರೀ ಪದಕಿಯವರು, ತಮಗೆ ಹೆಚ್ಚಿಗೆ ಹಣ ಸಿಗುತ್ತಿದ್ದರೂ ಕೂಡ, ಎರಡು ಜವಾಬ್ದಾರಿ ವಹಿಸಲಿಕ್ಕೆ ಸಾಧ್ಯವಿಲ್ಲವೆಂದೂ, ಇದರಿಂದ ತಾವು ಸ್ಕೂಲ್ ಬೋರ್ಡಿಗೆ ಅನ್ಯಾಯ ಮಾಡಿದಂತಾಗುತ್ತದೆಂದೂ, ಕಾರಣ ಸರಕಾರದವರು ಕೂಡಲೇ ಒಬ್ಬ ಶಿಕ್ಷಣಾಧಿಕಾರಿಯನ್ನು ನೇಮಿಸಬೇಕೆಂದೂ ಹೇಳಿರುವರು. ಶಿಕ್ಷಣಾಧಿಕಾರಿಯನ್ನು ನೇಮಿಸಲಿಕ್ಕೆ ತಡಮಾಡುತ್ತಿರುವ ಮೈಸೂರು ಸರಕಾರದ ನೀತಿ ದುರ್ಲಕ್ಷತನವನ್ನು ತೋರಿಸುತ್ತದೆ. ಇದರ ಕಡೆ ಶಿಕ್ಷಣ ಮಂತ್ರಿಗಳು ಗಮನ ಕೊಡುವರೇ ?

ಎನ್. ಕೆ. ಉಪಾಧ್ಯಾಯ
ಬಿಜಾಪುರ

ಮನೆಯಲ್ಲಿ ಬೀಡಿ ಕಟ್ಟಲಿಕ್ಕೂ ಲೈಸೆನ್ಸ್ ಬೇಕಂತೆ !

ಮಂಗಳೂರು ಮುನಿಸಿಪಾಲಿಟಿಯ ಕೆಲವು ಅಧಿಕಾರಿಗಳು ಇತ್ತೀಚೆಗೆ ಕೆಲವು ಬೀಡಿ ಮಜೂರರಿಗೆ ವಿಚಿತ್ರವಾದ ನೋಟೀಸುಗಳನ್ನು ಜ್ಯಾರಿ ಮಾಡಿದ್ದಾರೆ ಮನೆಯಲ್ಲಿ ಬೀಡಿ ಕಟ್ಟುವ ಮಜೂರರು ಲೈಸನ್ಸ್ ಪಡೆದುಕೊಳ್ಳಬೇಕು ಎಂಬುದೇ ಈ ನೋಟೀಸು.

ಬೀಡಿ ಮಜೂರರು ಬೀಡಿ ಕಟ್ಟುವುದಕ್ಕಾಗಿ ಲೈಸನ್ಸ್ ಪಡೆದುಕೊಳ್ಳಬೇಕೆಂಬ ಕ್ರಮವೇ ಸರಿಯಲ್ಲವೆಂದೂ, ಒಂದು ವೇಳೆ ಹಾಗೆ ಬೇಕಿದ್ದರೆ ಈ ಲೈಸನ್ಸ್ ಫೀಸನ್ನು ಸಂಬಂಧಪಟ್ಟ ಮ್ಹಾಲಕರುಗಳಿಂದ ಪಡೆಯಬೇಕೆಂದೂ ದ. ಕ. ಬೀಡಿ ಎಂಡ್ ಟೊಬೆಕ್ಕೊ ಲೇಬರ್ ಯೂನಿಯನ್ ಸಂಬಂಧಿಸಿದ ಅಧಿಕಾರಿಗಳನ್ನು ಕೇಳಿಕೊಂಡಿತ್ತು.

ನಗರದೊಳಗೆ ಸಾವಿರಾರು ಮಂದಿ ಮನೆಯಲ್ಲಿ ಬೀಡಿ ಕಟ್ಟುತ್ತಿರುವರಾದರೂ ಕೇವಲ ಒಂದೆರಡು ವಾರ್ಡುಗಳ ನಾಲ್ಕಾರು ಮಂದಿ ಮಜೂರರಿಗೆ ಈ ರೀತಿಯ ನೋಟೀಸು ಕೊಡಬೇಕಾದರೆ ಅದಕ್ಕೊಂದು ವಿಚಿತ್ರ ಕಾರಣವಿರಬೇಕು. ಇದು "ಮಾಮೂಲು" ಪ್ರಶ್ನೆಯೆ? ಎಂದು ಜನ ಕೇಳುತ್ತಿದ್ದಾರೆ.

ಅದು ಹೇಗೂ ಇರಲಿ. ಬಡ ಮಜೂರರಿಂದ ಈ ರೀತಿ ಲೈಸನ್ಸ್ ಫೀಸು ವಸೂಲು ಮಾಡಬಾರದೆಂಬ ಮನವಿಯನ್ನು ಇತ್ತೀಚೆಗೆ ದ. ಕ. ಬೀಡಿ ಎಂಡ್ ಟೊಬೆಕ್ಕೊ ಲೇಬರ್ ಯೂನಿಯನಿನ ಪರವಾಗಿ ಮಂಗಳೂರು ಮುನಿಸಿಪಲ್ ಚೆಯರ್ಮೇನರಿಗೆ ಮನವಿ ಅರ್ಪಿಸಲಾಗಿದೆ. ಇನ್ನು ಮುಂದೆ ಹೀಗೆ ನೋಟೀಸು ಜ್ಯಾರಿ ಮಾಡಬಾರದೆಂದು ತಾನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವ ಭರವಸೆಯನ್ನು ಚೆಯರ್ಮೇನರು ಕೊಟ್ಟಿರುವರಾಗಿ ತಿಳಿದುಬರುತ್ತದೆ.

'ಕಿಲೋರ್ಸ್ಕರ'ದಲ್ಲಿ ಅಕ್ರಮ ನಡತೆಗಳು ಹೆಚ್ಚಾಗಿವೆ

ಹರಿಹರದಲ್ಲಿರುವ ಮೈಸೂರು ಕಿರ್ಲೋಸ್ಕರ ಕಂಪೆನಿಯ ಇನ್ಸ್ಪೆಕ್ಷನ್ ಡಿಪಾರ್ಟ್ಮೆಂಟನಲ್ಲಿ ೧೫ ತಿಂಗಳುಗಳಿಂದ ಕೆಲಸ ಮಾಡುತ್ತಿದ್ದ ೩ ಜನ ಡಿಪ್ಲೋಮಾ ಹೋಲ್ಡರುಗಳನ್ನು ಕರೆದು "ಕಂಪೆನಿಯವರು ನಿಮ್ಮನ್ನು ಡಿಸ್ಚಾರ್ಜ್ ಮಾಡಬೇಕೆಂದಿದ್ದಾರೆ. ಹಾಗಾದರೆ ನಿಮಗೆ ಒಳ್ಳೇ ಸರ್ಟಿಫಿಕೇಟ್ ಸಿಕ್ಕುವುದಿಲ್ಲ, ನೀವು ರಾಜಿನಾಮೆ ಕೊಟ್ಟರೆ ನಿಮಗೆ ಒಳ್ಳೇ ಸರ್ಟಿಫಿಕೇಟ್ ಕೊಡುತ್ತಾರೆ" ಎಂದು ಹೇಳಿ ಅಪರೋಕ್ಷ ಒತ್ತಾಯ ತಂದು ಅವರಿಂದ ರಾಜೀನಾಮೆ ಪಡೆದು ಕೆಲಸದಿಂದ ತೆಗೆದು ಹಾಕಿದ ಕಾನೂನು ಬಾಹಿರ ನೀತಿಯನ್ನು ಕಾರ್ಮಿಕರು 30—7—58ರಂದು ಸಭೆ ಸೇರಿ ತೀವ್ರವಾಗಿ ಪ್ರತಿಭಟಿಸಿದರು. ಇದಕ್ಕೆ ಸಂಬಂಧಿಸಿದ ನಿರ್ಣಯವನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು.

ಹೊಸ ಅಧಿಕಾರಿವರ್ಗ

ಮೈಸೂರು ಕಿರ್ಲೋಸ್ಕರ ನೌಕರರ ಸಂಘದ ವಾರ್ಷಿಕ ಚುನಾವಣೆ ನಡೆದು 1958—1959ರ ಸಾಲಿಗೆ ಕೆಳಗಿನಂತೆ ಅಧಿಕಾರಿ ವರ್ಗವನ್ನು ಚುನಾಯಿಸಲಾಯಿತು.

ಶ್ರೀ ಎಂ. ಸಿ. ನರಸಿಂಹನ್, ಎಂ. ಎಲ್. ಎ., (ಅಧ್ಯಕ್ಷರು), ಹೆಚ್. ಎಸ್. ರಾಮಚಂದ್ರ ರಾವ್ (ಉಪಾಧ್ಯಕ್ಷರು), ರುದ್ರಪ್ಪ ಮೋಟೆಬೆನ್ನೂರು (ಕಾರ್ಯದರ್ಶಿ) ಪಿ. ಅಬ್ದುಲ್ ಕರಿಂಸಾಬ್ (ಸಹಕಾರ್ಯದರ್ಶಿ), ವೈ. ಪಿ. ರೋಖಡೆ (ಖಜಾಂಚಿ) ಮತ್ತು ಸಮಿತಿಯ ಸದಸ್ಯರುಗಳಾಗಿ 8 ಜನರನ್ನು ಚುನಾಯಿಸಲಾಯಿತು.

ಅಡಿಕೆ ಸುಲಿಯುವ ಮಹಿಳೆಯರ ಮೇಲೆ ಅನ್ಯಾಯ !

ಗುಬ್ಬಿಯ ಅಡಿಕೆ ಸುಲಿಯುವ ಕೆಲಸಗಾರರ ಸಂಘಕ್ಕೆ ಈಗ ಸೇರಿದ ಹಾಗಲ್ವಾಡಿ ಅಡಿಕೆ ಸುಲಿಯುವ ಸುಮಾರು ನೂರು ಮಹಿಳೆಯರು ಸೇರಿ ಕೆಳಗಿನಂತೆ ತೀರ್ಮಾನಿಸಿರುತ್ತಾರೆ:

ಅಡಿಕೆ ಮಾಲೀಕರು ಈ ವರೆಗೂ 28 ಸೇರಿನ ಬಳ್ಳ ಒಂದಕ್ಕೆ 4 ಆಣೆ ಒಂದು ಪಾವು ಅಡಿಕೆಯಂತೆ ಕೊಡುತ್ತಾ ಇದ್ದು ಈಗ ದಿನನಿತ್ಯದ ಬಳಕೆಯ ಪದಾರ್ಥಗಳ ಬೆಲೆ ಏರುತ್ತಿದ್ದರೂ ಎಲ್ಲಾ ಹೆಂಗಸರೂ ಒಗ್ಗಟ್ಟಾಗಿ 28 ಸೇರಿನ ಬಳ್ಳಕ್ಕೆ ಬದಲು 16 ಸೇರಿಗಿಳಿಸಬೇಕೆಂತಲೂ ಬಳ್ಳಕ್ಕೆ 6 ಆಣೆ 1 ಪಾವು ಅಡಕೆ ಕೊಡಬೇಕೆಂತಲೂ ಬಲವಂತಪಡಿಸುತ್ತಾರೆ.

೨. ಕೆಲಸಗಾರರ ಸಂಘವೊಂದಿಲ್ಲದುದರಿಂದ ಮಾಲಿಕರು ಸುಳ್ಳು ಲೆಕ್ಕಗಳನ್ನು ಮಾಡುವುದು, ಕೆಲಸಗಾರರನ್ನು ಅಸಭ್ಯ ರೀತಿಯಲ್ಲಿ ನಡೆಸಿಕೊಳ್ಳುವುದು ಮುಂತಾದವುಗಳನ್ನು ಸಭೆಯು ಗಮನಿಸಿ ಅಡಿಕೆ ಸುಲಿಯುವ ಮಹಿಳೆಯರ ಸಂಘವನ್ನು ಸ್ಥಾಪಿಸಲಾಯಿತು.

ಅಧಿಕಾರಿ ವರ್ಗವನ್ನು ಹೀಗೆ ಚುನಾಯಿಲಾಯಿತು. ಅಧ್ಯಕ್ಷರು–ಹೆಚ್. ಎಲ್. ದಾಸಪ್ಪ, ಕಾರ್ಯದರ್ಶಿ: ಹೆಚ್. ಟಿ. ಸಿದ್ರಾಮಯ್ಯ. ಏಳು ಜನ ಮಹಿಳಾ ಸದಸ್ಯರಿರುವ ಸಮಿತಿಯನ್ನೂ ರಚಿಸಲಾಯಿತು.

ಅಗ್ಗದರದ ಅಕ್ಕಿಯಂಗಡಿಗಳನ್ನು ತೆರೆಯುವಂತೆ ಒತ್ತಾಯಿಸುವ ಚಳವಳಿ

(೭ನೇ ಪುಟದಿಂದ)

ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ.

ಆದರೆ ಜತ್ತಿ ಸರಕಾರ ಜನರ ಕೇಳಿಕೆಗಳನ್ನು, ಒತ್ತಾಯವನ್ನು ಗಮನಿಸಿಯೇ ಇಲ್ಲವೆಂಬಂತೆ ಕಾಣುತ್ತದೆ. ಇತ್ತೀಚೆಗೆ ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಸಮಿತಿಗೆ ಸರಕಾರದಿಂದ ಬಂದ ಪತ್ರವೊಂದರಲ್ಲಿ "ಈ ಪ್ರಶ್ನೆ ಸರಕಾರದ ಪರಿಶೀಲನೆಯಲ್ಲಿದೆ" ಎಂದಷ್ಟೇ ಹೇಳಲಾಗಿತ್ತು.

ಅಕ್ಕಿಯ ಬೆಲೆ ಮಾತ್ರವಲ್ಲ, ಕಳೆದ ಎರಡು ವಾರಗಳಲ್ಲಿ ಇತರ ನಿತ್ಯ ಉಪಯೋಗೀ ಸಾಮಾಗ್ರಿಗಳ ಬೆಲೆಯೂ ಒಂದೇ ಸವನೆ ಏರಲು ಆರಂಭವಾಗಿದೆ. ಇದು ಜನರಲ್ಲಿ ಇನ್ನೂ ಗಾಬರಿಗೆ ಎಡೆಮಾಡಿಕೊಟ್ಟಿದೆ. ಸರಕಾರ ಇನ್ನೂ ಕಣ್ಮುಚ್ಚಿ, ಕೈಕಟ್ಟಿ, ಮೌನವಾಗಿ ಕುಳಿತರೆ ಜಿಲ್ಲೆಯಲ್ಲಿ ಜನಜೀವನದ ಪರಿಸ್ಥಿತಿ ಇನ್ನೂ ವಿಷಮವಾಗುವುದರಲ್ಲಿ ಸಂದೇಹವಿಲ್ಲ.

ಸ್ಟಾಕ್‌ಹೋಂ ಅಧಿವೇಶನ..

(೫ನೇ ಪುಟದಿಂದ)

ಪ್ರಚ್ಛನ್ನ ಯುದ್ಧವನ್ನು ಕೊನೆಗಾಣಿಸಲು ಮತ್ತು ನಿರಾಯುಧೀಕರಣವನ್ನು ಸಾಧಿಸಲು ತಮ್ಮ ಶಕ್ತಿಗೊಳಪಟ್ಟ ಪ್ರತಿಯೊಂದು ಕಾರ್ಯವನ್ನೂ ಮಾಡಬೇಕೆಂದು ಎಲ್ಲ ದೇಶಗಳ ಜನತೆಗಳಿಗೂ ಮತ್ತು ಸರಕಾರಗಳಿಗೂ ನಿರಾಯುಧೀಕರಣ—ಅಂತರರಾಷ್ಟ್ರೀಯ ಸಹಕಾರ ಸಮ್ಮೇಲನವು ಮನವಿಯನ್ನು ಹೊರಡಿಸಬೇಕು. ಅಂತರರಾಷ್ಟ್ರೀಯ ವೈಮನಸ್ಯ ಪರಿಹಾರದ ದಿಶೆಯಲ್ಲಿ ಸಂಯುಕ್ತ ಪ್ರಯತ್ನಗಳನ್ನು ಮಾಡಲು, ನಿರಾಯುಧೀಕರಣದ ಮತ್ತು ಅಂತರರಾಷ್ಟ್ರೀಯ ಸಹಕಾರದ ಸಮಸ್ಯೆಗಳನ್ನು ಪರಿಶೀಲಿಸುವುದಕ್ಕಾಗಿ ಅಂತರ–ರಾಷ್ಟ್ರೀಯ ಸಮಿತಿಯನ್ನು ಸ್ಥಾಪಿಸುವುದು ಅವಶ್ಯಕವೆನಿಸುತ್ತದೆ.

ಈ ಸಮಿತಿಯು ಪ್ರಚ್ಛನ್ನ ಯುದ್ಧವನ್ನು ತೊಡೆದುಹಾಕುವುದಕ್ಕಾಗಿ, ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ತಾವು ಕೈಗೊಂಡ ಕಾರ್ಯಕ್ರಮಗಳ ಕುರಿತು ವರದಿ ಮಾಡಲು, ಅದು ನಡೆಸುವ ಸಭೆಗಳಲ್ಲಿ ಭಾಗವಹಿಸುವುದಕ್ಕಾಗಿ ಸರಕಾರಾಧಿಪತಿಗಳನ್ನು ಈ ಸಮಿತಿಯು ಆಹ್ವಾನಿಸಬಹುದು.

ನಿರಾಯುಧೀಕರಣ— ಅಂತರರಾಷ್ಟ್ರೀಯ ಸಹಕಾರ ಸಮ್ಮೇಲನವು ಜನತೆಗಳಿಗೆ ಸ್ಪಷ್ಟವಾದ ಲಕ್ಷ್ಯಗಳನ್ನು ಸೂಚಿಸಲು ಸಮರ್ಥವಾಗುವುದು ಮತ್ತು ಪರಮಾಣು ವಿಪತ್ಸೂಚನೆಯ ವಿರೋಧವಾಗಿಯೂ, ನಿರಾಯುಧೀಕರಣದ ಸಲುವಾಗಿಯೂ ಮತ್ತು ಎಲ್ಲ ರಾಷ್ಟ್ರಗಳ ನಡುವಣ ಸಹಕಾರದ ಸಲುವಾಗಿಯೂ ನಡೆಸಲಾಗುವ ಹೋರಾಟದ ವಿಸ್ತರಣೆಗೆ ಇದರಿಂದ ಮಾರ್ಗವುಂಟಾಗುವುದೆಂಬ ಭರವಸೆ ನನಗಿದೆ.

ಕಮ್ಯೂನಿಸ್ಟ್ ಪಾರ್ಟಿಯ ಸಭೆಗಳು

ವಿಷಮಿಸುತ್ತಿರುವ ಆಹಾರ ಸ್ಥಿತಿಯ ಬಗ್ಗೆ ಕಳವಳ

ಶಿವಮೊಗ್ಗಾ—

ತಾ|| 27—7—58ರಂದು ಬೆಳಿಗ್ಗೆ 11ಕ್ಕೆ ಗಂಟೆಯಲ್ಲಿ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯು ಕಾರ್ಯಾಲಯದಲ್ಲಿ ಸಮಾವೇಶಗೊಂಡಿತ್ತು.

ಸಭೆಯ ಅಧ್ಯಕ್ಷತೆಯನ್ನು ಪಾರ್ಟಿಯ, ಜಿಲ್ಲೆಯ ಸೆಕ್ರೆಟೆಂಯಟ್ ಸದಸ್ಯರೂ, ತೀರ್ಥಹಳ್ಳಿ ಪೌರಸಭೆಯ ಸದಸ್ಯರೂ ಆದ ಕಾಂ. ಸಿ. ಕೆ. ಜನಾರ್ದನ ನಾಯಕ್‌ರವರು ವಹಿಸಿದ್ದರು.

ಜಿಲ್ಲಾ ಕಾರ್ಯದರ್ಶಿ ಕಾಂ. ಕೆ. ಚಂದುಕುಟ್ಟಿಯವರು ಸ್ವಾಗತಿಸಿದ ಬಳಿಕ ಪಾರ್ಟಿಯ ಜಿಲ್ಲಾ ಸೆಕ್ರೆಟರಿಯಟ್ ಸದಸ್ಯರೂ ಮತ್ತು ನ್ಯಾಯವಾದಿಗಳೂ ಆದ ಕಾಂ. ಬಿ. ಎರ್. ಎ. ಹೆಗ್ಗಡೆ, ಕಾಂ. ಎಸ್. ಎಂ. ವೆಂಕಟಪ್ಪ ಮತ್ತು ತರುಣ ನ್ಯಾಯವಾದಿಗಳಾದ ಕಾಂ. ಕೆ. ಎಂ. ಶ್ರೀನಿವಾಸ್‌ರವರು ಪಾರ್ಟಿಯ ಮುನ್ನಡೆಯ ವಿಷಯವಾಗಿ ಮಾತನಾಡಿದರು.

ಜಿಲ್ಲಾ ಸಮ್ಮೇಳನದ ಬಗ್ಗೆ ಕೇರಳದ ಮುಖ್ಯಮಂತ್ರಿ ಕಾಂ. ಇ. ಎಂ. ಎಸ್. ನಂಬೂದ್ರಿಪಾದ್‌ರವರಿಂದ ಬಂದ ಪತ್ರವನ್ನು ಪರಿಶೀಲಿಸಲಾಯಿತು.

ಜಿಲ್ಲೆಯ ಪಾರ್ಟಿಯ ಎಲ್ಲ ಕಾರ್ಯಕರ್ತರಿಗೂ ಪಾರ್ಟಿಯ ಬಗ್ಗೆ ಹೆಚ್ಚು ತಿಳುವಳಿಕೆ ಕೊಡಲು ಶಿವಮೊಗ್ಗಾದಲ್ಲಿ ಆಗಸ್ಟ್ ೧೫, ೧೬ ಮತ್ತು ೧೭ ರಂದು ಮೂರು ದಿವಸಗಳ ಪರ್ಯಂತ "ಪಾರ್ಟಿ ಕ್ಲಾಸ್" ನಡೆಸಲು ತೀರ್ಮಾನಿಸಲಾಯಿತು.

ಈ ಕೆಳಕಂಡ ನಿರ್ಣಯಗಳನ್ನು ಮಾಡಲಾಯಿತು:—

೧. ನಿತ್ಯಉಪಯೋಗದ ಸಾಮಾನುಗಳ ಬೆಲೆಯು ದಿನ ದಿನಕ್ಕೂ ವಿಷಮ ಪರಿಸ್ಥಿತಿಗೆ ಏರುತ್ತಿರುವ ದೆಶೆಯಿಂದ ಸಾಮಾನ್ಯ ಜನತೆಗೆ ಜೀವನವನ್ನೂ ಸಾಗಿಸುವುದೇ ಕಷ್ಟವಾಗುತ್ತಿದೆ. ಸರಕಾರದವರು ಇದರ ವಿರುದ್ಧ ಈವರೆವಿಗೂ ಯಾವ ವಿಧವಾದ ಕಾರ್ಯಕ್ರಮ ಕೈಗೊಳ್ಳದಿರುವುದು ಖಂಡನೀಯ ಈಗಲಾದರೂ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯ ಪಡಿಸುತ್ತದೆ.

೨. ಭೂಸುಧಾರಣೆಯನ್ನು ಜಾಗ್ರತೆ ಮಾಡುತ್ತೇವೆ ಎಂದು ಹೇಳುವ ಕಾಂಗ್ರೆಸ್ ಸರ್ಕಾರ ಶಿವಮೊಗ್ಗಾ "ತುಂಗಭದ್ರಾ" ಸಕ್ಕರೆ ಕಾರ್ಖಾನೆಗೆ 5000 ಸಾವಿರ ಎಕರೆ ಒಬ್ಬ ವ್ಯಕ್ತಿಗೆ ಕೊಟ್ಟಿರುವುದು ಖಂಡನೀಯ, ಸುತ್ತಮುತ್ತಲ ಹಳ್ಳಿಯ ಜಮೀನಿಲ್ಲದ ರೈತರಿಗೆ ಈ ಜಮೀನನ್ನು ಕೊಡಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತದೆ.

೩. ಮೊನ್ನೆ ಶಿವಮೊಗ್ಗಾದಲ್ಲಿ ನಡೆದ ದುರ್ಘಟನೆ ಬಗ್ಗೆ ವಿಷಾದಿಸಿ ಇದು ಮತೀಯ ಗಲಭೆಯಲ್ಲವೆಂದೂ ಕೇವಲ ಒಕ್ಕಲಿಗೂ, ಜಮಿನ್ದಾರರಿಗೂ ಆದ ಭಿನ್ನಾಭಿಪ್ರಾಯ ಈ ಕಲಹಕ್ಕೆ ಎಡೆಕೊಟ್ಟಿತೆಂದು ಪರಿಗಣಿಸಿ ಈ ಕಲಹಕ್ಕೆ ಮತೀಯ ಬಣ್ಣ ಕೊಡಲು ಪ್ರಯತ್ನಿಸಿದ ಕೆಲವು ಜಾತಿವಾದಿ ಮುಖಂಡರುಗಳ ಬಗ್ಗೆ ಖಂಡನೆ ಸೂಚಿಸುತ್ತದೆ.

ದಾವಣಗೆರೆ—

ಭಾರತ ಕಮ್ಯೂನಿಸ್ಟ್ ಪಾರ್ಟಿಯ ದಾವಣಗೆರೆ ಶಾಖಾ ಸಮಿಯ ಸಭೆಯು ತಾ. 20-7-58ರಂದು ಪಾರ್ಟಿ ಆಫೀಸಿನಲ್ಲಿ ಸೇರಿದ್ದಿತು. ಸಭೆಯಲ್ಲಿ ಚಿತ್ರದುರ್ಗ ಜಿಲ್ಲಾ ಪಾರ್ಟಿಯ ಸಂಘಟನಾ ಸಮಿತಿಯ ಕಾರ್ಯದರ್ಶಿಗಳಾದ ಕಾ|| ಎಸ್. ಹನುಮಂತ ರೆಡ್ಡಿ, ಎಂ.ಎ , ಬಿ.ಎಲ್.ರವರು ಉಪಸ್ಥಿತರಿದ್ದರು. ಶಾಖಾ ಕಾರ್ಯದರ್ಶಿಗಳಾದ ಕಾ|| ಎಚ್. ಎಸ್. ರಾಮಚಂದ್ರ ರಾವ್‌ರವರು ಸ್ಥಳೀಯ ಪಾರ್ಟಿಯ ಕಾರ್ಯದ ಬಗ್ಗೆ ಸೂಕ್ಷ್ಮವಾಗಿ ವರದಿಯನ್ನೊಪ್ಪಿಸಿ, ಪಾರ್ಟಿಯು ರೈತ—ಕಾರ್ಮಿಕರ ಮುಂದಾಳುತನವನ್ನು ವಹಿಸಿಕೊಳ್ಳುವುದಕ್ಕೆ ಅತ್ಯಗತ್ಯವಾಗಿರುವ ಪಾರ್ಟಿಯ ಸಂಘಟನೆಯನ್ನು ತಾತ್ವಿಕವಾಗಿ ಬಲಗೊಳಿಸುವುದಕ್ಕೆ ಸರ್ವರೂ ಪ್ರಯತ್ನಿಸಬೇಕೆಂದು ಒತ್ತಿಹೇಳಿದರು. ಹೊಸದಾಗಿ ಪಾರ್ಟಿಗೆ ಸೇರಿರುವ ಸದಸ್ಯರನ್ನು ಸ್ವಾಗತಿಸಲಾಯಿತು. ಎಲ್ಲಾ ಸದಸ್ಯರೂ ಚರ್ಚೆಯಲ್ಲಿ ಭಾಗವಹಿಸಿದ್ದರು.

ಜಿಲ್ಲಾ ಸಮಿತಿಯು ತೀರ್ಮಾನಿಸಿರುವಂತೆ ಅಕ್ಟೋಬರ್ ತಿಂಗಳಲ್ಲಿ ಜಿಲ್ಲಾ ಪಾರ್ಟಿಯ ಸಮ್ಮೇಳನವನ್ನು ಯಶಸ್ವಿಗೊಳಿಸುವುದಕ್ಕೆ ಸರ್ವವಿಧದಲ್ಲಿಯೂ ಶ್ರಮಿಸಬೇಕು.

ಜನಸಾಮಾನ್ಯರಿಗೆ ಅತ್ಯಗತ್ಯವಾಗಿ ಬೇಕಾಗಿರುವ ಆಹಾರ ಪದಾರ್ಥಗಳ ಬೆಲೆಯು ವಿಪರೀತಕ್ಕೆ ಹೋಗುತ್ತಿದ್ದು ಸಾಮಾನ್ಯ ಜನರು ಅತಿ ಕಷ್ಟಕ್ಕೆ ಸಿಗುವಂತಾಗಿದೆ. ಈ ರೀತಿ ಪದಾರ್ಥಗಳ ಬೆಲೆಗಳು ಏರುತ್ತಿರುವುದನ್ನು ತಡೆಯುವಕ್ಕಾಗಿ ಶೀಘ್ರವೇ ಸರಕಾರವು ತೀವ್ರ ಕ್ರಮವನ್ನು ತೆಗೆದುಕೊಳ್ಳುವಂತೆ ಒತ್ತಾಯಿಸುತ್ತದೆ—ಎಂಬ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ರೂಪಾಯಿ 2,000 ಪಾರ್ಟಿ ನಿಧಿಗೆ ಸಹಾಯ

ಪಾರ್ಟಿಯ 2,000 ರೂಪಾಯಿ ನಿಧಿ ಶೇಖರಣೆಯ ಕಾರ್ಯದಲ್ಲಿ ಕೆಲವು ಪಾರ್ಟಿ ಘಟಕಗಳು ತಮ್ಮ ಪಾಲನ್ನು ಪೂರ್ಣವಾಗಿ ಸಂದಾಯ ಮಾಡಿವೆ. ಈವರೆಗೆ ಇನ್ನೂ ಪಾವತಿ ಮಾಡದಿರುವ ಘಟಕಗಳು ತ್ವರೆಯಿಂದ ಕಳಿಸಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಾಚಕರೂ, ಪಾರ್ಟಿ ಹಿತೈಷಿಗಳು ಉದಾರವಾಗಿ ಸಹಾಯ ನೀಡಿ, ನಿಧಿ ಶೇಖರಣೆ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕೆಂದು ವಿನಂತಿಸುತ್ತೇವೆ.

ಹಿಂದೆ ವಸೂಲಾದ್ದು ರೂ.	550-50
ಈಗ ಬಂದಿರುವುದು:—	
ದ.ಕ. ಜಿಲ್ಲಾ ಸಮಿತಿ ರೂ.	75-00
ಶಿವಮೊಗ್ಗ ಸಮಿತಿ ,,	25-00
ಕೊಡಗು ಸಮಿತಿ ,,	90-00
ಹನುಮಂತ ಜಟ್ಟಿ ,,	1-00
ಟಿ.ಕೆ. ಗೋಪಾಲಕೃಷ್ಣ	2-00
ಸಕಲೇಶಪುರದ ಶ್ರೀ ಎಸ್. ರಾಜು ಮತ್ತು ಕೆ. ಎಂ. ತಂಬಿ ,,	5-00
ಬಿಜಾಪುರ ಜಿಲ್ಲಾ ಸಮಿತಿ	25-00
	773-50

ವಾರದ ವಾರ್ತಾ ಸಮೀಕ್ಷೆ

(೨ನೇ ಪುಟದಿಂದ)

ಯಿಂದಾಗಿ ವಿಶ್ವದಮೇಲೆ ಯುದ್ಧದ ಕಾರ್ಮೋಡ ಕವಿದಿರುವಾಗ ರಷ್ಯಾ—ಚೀಣ ಎಂಬ ಬೃಹತ್ ಸಮಾಜವಾದೀ ರಾಷ್ಟ್ರಗಳ ನಾಯಕರೊಡನೆ ಮಾತುಕತೆ ನಡೆದಿರುವುದು ಮಹತ್ವವಾದ ಅಂಶವಾಗಿದೆ. ಸತತವಾಗಿ ಶಾಂತಿಗಾಗಿ ಶ್ರಮಿಸುತ್ತಿರುವ ರಷ್ಯಾ—ಚೀಣಗಳ ನಡುವೆ ಇರುವ ದೃಢವಾದ ಸೌಹಾರ್ದತೆ ಮತ್ತು ಏಕಾಭಿಪ್ರಾಯ ಸಾಮ್ರಾಜ್ಯವಾದೀ ಯುದ್ಧಕೋರರಿಗೆ ಭೀತಿಯನ್ನುಂಟುಮಾಡಿದೆ.

'ರಮೇಶ'

ಮೈಸೂರು ಜಿಲ್ಲಾ ರೇಷ್ಮೆ ಕೆಲಸಗಾರ ಸಂಘದ ಸರ್ವಸದಸ್ಯರ ಸಭೆ

ಮೈಸೂರು ಡಿಸ್ಟ್ರಿಕ್ಟ್ ಸಿಲ್ಕ್ ವರ್ಕರ್ಸ್ ಯೂನಿಯನ್ನಿನ ಸರ್ವಸದಸ್ಯರ ಸಭೆಯು ಕೊಳ್ಳೇಗಾಲದಲ್ಲಿ ಸಂಘದ ಅಧ್ಯಕ್ಷರಾದ ಸೋಮಸುಂದರಶರ್ಮರ ಅಧ್ಯಕ್ಷತೆಯಲ್ಲಿ ಜರುಗಿ ಕೆಳಗಿನ ಕಾರ್ಯಕ್ರಮಗಳನ್ನು ನಡೆಸಿತು.

೧. ಸರ್ಟಿಫೈಡ್ ಆಡಿಟರ್‌ರವರಿಂದಾದ ಲೆಕ್ಕಾಪತ್ರಗಳನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು. ಕಾರ್ಯಕಾರಿ ಸಮಿತಿಯನ್ನು ಹೀಗೆ ರಚಿಸಲಾಯಿತು. ಕಾ|| ಸೋಮಸುಂದರಶರ್ಮ ಅಧ್ಯಕ್ಷರು, ಕಾಂ. ಕೆ. ಎರ್. ಅಚ್ಚುತನ್ ಪ್ರಧಾನ ಕಾರ್ಯದರ್ಶಿ, ಜನಾರ್ಧನ ಖಜಾಂಚಿ.

ಕಾಂಗ್ರೆಸ್ಸಿಗರ ಭೇದನೀತಿ

ತಮ್ಮ ಸಂಘವನ್ನು ಸ್ಥಾಪಿಸಿಕೊಂಡು ತಮ್ಮ ನ್ಯಾಯವಾದ ಬೇಡಿಕೆಗಳಿಗೆ ನ್ಯಾಯವಾದ ರೀತಿಯಲ್ಲಿ ಹೋರಾಟ ನಡೆಸಿರುವ ಮೈಸೂರು ಮುನಿಸಿಪಲ್ ಕೆಲಸಗಾರರ ಐಕ್ಯತೆಯನ್ನು ಮುರಿಯಲು ಕಾಂಗ್ರೆಸ್ಸಿಗರು ಪ್ರಯತ್ನಿಸುತ್ತಿದ್ದಾರೆ. ಹೊಸ ಸ್ಕೇಲಿನ ಸಂಬಳಕ್ಕಾಗಿ ಕೆಲಸಗಾರರು ಮುಷ್ಕರದ ನೋಟೀಸ್ ಕೊಟ್ಟು ಟ್ರಿಬ್ಯೂನ್‌ನಲ್ಲಿ ವಿಚಾರಣೆ ನಡೆದುದರ ಫಲವಾಗಿ ಅವಾರ್ಡ್ ಪ್ರಕಟವಾಗಲಿದೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಕೌನ್ಸಿಲರುಗಳಾದ ಶ್ರೀ ಸಂಜೀವಯ್ಯ ಮುಂತಾದವರು "ಇದು ನಮ್ಮ ಮುನ್ಸಿಪಾಲ್ಟಿ, ನಿಮಗೆ ಹೆಚ್ಚು ಸಂಬಳ ಕೊಡುತ್ತೇವೆ, ಆದಕ್ಕಾಗಿ ಬೇರೆ ಸಂಘ ಕಟ್ಟೋಣ" ಎಂದು ಮುಂತಾಗಿ ಸುಳ್ಳು ಆಶೆಗಳನ್ನು ಕೊಟ್ಟು ಕೆಲಸಗಾರರ ಐಕ್ಯತೆಯನ್ನು ಮುರಿಯುವ ಇವರ ಕಾರ್ಮಿಕ ದ್ರೋಹದ ನೀತಿಯನ್ನು ವಿರೋಧಿಸಲು, ಅವಾರ್ಡಿನಂತೆ ಸಂಬಳ ಪಡೆಯಲು ಕೆಲಸಗಾರರು ಸಿದ್ಧರಾಗುತ್ತಿದ್ದಾರೆ.

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಮನವಿ

(೨ನೇ ಪುಟದಿಂದ)

ದ ಕೇರಳ ಸರಕಾರವು ದೂರವಾಗುವಂತೆ ಮಾಡುವುದು ಅವರಿಗೆ ಬೇಕಾಗಿತ್ತು. ತಮ್ಮ ಆಳ್ವಿಕೆಯಲ್ಲಿ ಅವರು ಜನರ ಕಾನೂನುಬದ್ಧ ಬೇಡಿಕೆಗಳನ್ನು ಅಲ್ಲಗಳೆದು ಪ್ರತಿಯೊಂದನ್ನೂ ಬೆತ್ತದೇಟು, ಗೋಲೀಬಾರ್‌ಗಳಿಂದ ಅದುಮಲೆತ್ನಿಸಿದ್ದರು. ಈ ದುಷ್ಕೃತ್ಯಗಳಿಗಾಗಿ ಮತದಾರರು ಕಳೆದ ಚುನಾವಣೆಯಲ್ಲಿ ಇವರನ್ನು ತಿರಸ್ಕರಿಸಿಬಿಟ್ಟರು.

ನಮ್ಮ ಮನವಿ

ಕೇರಳದ ಈ ಪರಿಸ್ಥಿತಿಯನ್ನು, ಸಮಸ್ಯೆಯನ್ನು ಅಪಪ್ರಚಾರಗಳಿಗೆ ಬಲಿಬೀಳದೆ ಜನರು ಸರಿಯಾಗಿ ತಿಳಿದುಕೊಳ್ಳಬೇಕೆಂದು ಸೆಕ್ರೆಟರಿಯೆಟ್ ಮನವಿ ಮಾಡಿಕೊಳ್ಳುತ್ತದೆ. ಜನರ ಬೆಂಬಲದಿಂದ ಭದ್ರವಾಗಿರುವ, ಪಟ್ಟಭದ್ರ ಹಿತಗಳಿಗೆ ಆತಂಕವಾಗಿ ನಿಂತಿರುವ ಸರಕಾರವನ್ನು ಅಪಗೀತಿಗೆಳೆದು ಮಸಿ ಬಳಿಯುವುದಕ್ಕಾಗಿ ಸತತ ಪ್ರಯತ್ನ ನಡೆದಿರುವದರಲ್ಲಿ ಸಂದೇಹವಿಲ್ಲ. ಪಟ್ಟಭದ್ರ ಹಿತಗಳವರು ಬೀಸಿದ ಬಲೆಯಲ್ಲಿ ಜನ ಬೀಳದಿರಲಿ. ಈಗಿನ ಸ್ಥಿತಿ ಕೇವಲ ಒಂದು ಪಾರ್ಟಿಯ ಹಣೆಬರೆಹವಾಗಿಲ್ಲ, ಭಾರತದಲ್ಲಿಯ ಪ್ರಜಾಪ್ರಭುತ್ವ ಹೋರಾಟದ ಭವಿಷತ್ತೇ ಆಗಿದೆ.

ಪ್ರತಿಪಕ್ಷಗಳವರಿಗಿರುವ ಕಾನೂನುಬದ್ಧ ಸ್ವಾತಂತ್ರ್ಯ—ಹಕ್ಕುಗಳನ್ನು ನಿರ್ಬಂಧಿಸುವದು ಕಮ್ಯೂನಿಸ್ಟ್ ಸರಕಾರಕ್ಕೆ ಬೇಕಾಗಿಲ್ಲವೆಂಬುದು ಸರ್ವವಿದಿತ ವಿಷಯವಾಗಿದೆ. ಪ್ರತಿಪಕ್ಷಗಳವರು ಪ್ರಜಾಪ್ರಭುತ್ವಾತ್ಮಕ ಮತ್ತು ರಾಜ್ಯಾಂಗದ ವಿಧಾನಗಳನ್ನು ಮುರಿಯದಿರಲೆಂದು ಕೇಳಿಕೊಳ್ಳುತ್ತೇವೆ. ಅವರ ನಡಾವಳಿ ದೇಶದಲ್ಲಿ ಪ್ರಜಾಪ್ರಭುತ್ವಾತ್ಮಕ ಸಂಸ್ಥೆಗಳ ಬೆಳವಣಿಗೆಗೆ ಅಪಾಯಕಾರಿಯಾಗಿದೆ.

ಸೆಕ್ರೆಟೇರಿಯೆಟ್ ತನ್ನ ಸದಾಶಯಗಳನ್ನು ತನ್ನ ಪಕ್ಷಕ್ಕೂ, ಕೇರಳದಲ್ಲಿರುವ ಸರಕಾರಕ್ಕೂ ಸಲ್ಲಿಸುತ್ತದೆ. ಸಂತತ ಅಪಪ್ರಚಾರ, ವಿರೋಧ, ಹಿಂಸೆಗಳೆದುರು ಧೀರತೆಯಿಂದ ನಿಂತು, ಕಾನೂನು ಬದ್ಧಹೋರಾಟಗಳನ್ನಡಗಿಸಲು ಪೋಲೀಸ್ ಶಕ್ತಿಯನ್ನು ಇನ್ನು ಬಳಸಲಾರದು ಎಂದು ಆಶ್ವಾಸನೆ ಕೊಡುತ್ತೇವೆ. ಜನರ ಒಪ್ಪಿಗೆಯಿಲ್ಲದೆ ಪಕ್ಷವು ಅಧಿಕಾರದಲ್ಲಿರಲು ಆಸಕ್ತವಾಗಿಲ್ಲ. ಪಿಸುಣರಿಗೂ, ಹಿಂಸಾತ್ಮಕ ಕೃತಿಗಳಿಗೂ ಸರಕಾರ ತಲೆಬಾಗಿಸದು. ಎಲ್ಲಾ ಪಾರ್ಟಿ ಘಟಕಗಳು ಕೇರಳ ಪಾರ್ಟಿಗೆ ಬೆಂಬಲವಾಗಿ ನಿಲ್ಲಬೇಕೆಂದು ಕರೆ ಕೊಡುತ್ತದೆ ಮತ್ತು ಜನರಲ್ಲಿ ಈ ಬಗ್ಗೆ ತಿಳುವಳಿಕೆ ಹರಡುವ ಆಂದೋಳನ ಕೈಕೊಳ್ಳಬೇಕೆಂದೂ ಕೇರಳ ಪಾರ್ಟಿಯೊಂದಿಗೆ ಇರುವ ತಮ್ಮ ಐಕ್ಯತೆಯನ್ನು ಪ್ರದರ್ಶಿಸಬೇಕೆಂದೂ ಕೇಳಿಕೊಳ್ಳುತ್ತದೆ.

ಎಲ್ಲಾ ಬುದ್ಧಿವಂತ ಜನರೂ ಕೇರಳದಲ್ಲಿ ಪ್ರತಿಪಕ್ಷಗಳವರ ಹಾಗೂ ಪಟ್ಟಭದ್ರಹಿತಗಳವರ ಈಗಿನ ಆಟಗಳನ್ನು ಸರಿಯಾಗಿ ತಿಳಿದುಕೊಂಡು ಅವುಗಳ ಸೋಲಿಗಾಗಿ ಧ್ವನಿಯೆತ್ತುತ್ತಾರೆಂದು ಸೆಕ್ರೆಟರಿಯೆಟ್ ಆಶಿಸುತ್ತದೆ!

——

ಡಾ॥ ರಾಜಬಹದೂರ್ ಗೌರ್ ಭಾಷಣ

(ಮೊದಲನೇ ಪುಟದಿಂದ)

ದನಾ ಸಾಮಗ್ರಿಗಳು ಸಮಾಜದ ಒಡೆತನದಲ್ಲಿರುತ್ತದೆ. ಲಾಭ ಕೇವಲ ಕೆಲವೇ ಮಂದಿಯ ಪಾಲಾಗುವ ಬದಲು, ಇಡೀ ಸಮಾಜಕ್ಕೆ ಸೇರಿದ್ದಾಗಿರುತ್ತದೆ.

ನೂರು ವರ್ಷಗಳ ಹಿಂದೆ ರಾಬರ್ಟ್ ಓವನ್‌ರ ಕಾಲದಲ್ಲಿ ಸಮಾಜವಾದೀ ತತ್ವ ಮುಂದಿರಿಸಲ್ಪಟ್ಟಾಗ ಅದು ಕೇವಲ ಕನಸಾಗಿತ್ತು. ಐವತ್ತು ವರ್ಷಗಳ ಹಿಂದೆ ಅದೊಂದು ಘೋಷಣೆಯಾಗಿತ್ತು. ಇಂದು ಅದು ವಾಸ್ತವವಾಗಿದೆಯಲ್ಲದೆ, ಸಮಾಜವಾದೀ ಜಗತ್ತು ಬಂಡವಾಳಶಾಹಿ ಜಗತ್ತಿನೊಂದಿಗೆ ಅಸ್ತಿತ್ವದಲ್ಲಿದೆ.

ನಮ್ಮ ದೇಶದಲ್ಲಿ 25 ವರ್ಷಗಳ ಹಿಂದೆ ಎ. ಐ. ಟಿ. ಯು ಸಿ. ಸಮಾಜವಾದದ ಘೋಷಣೆ ಇತ್ತಿತು. ಅಂದು ಸಮಾಜವಾದವೆಂದರೆ ಎಲ್ಲರೂ ಮೂಗು ಮುರಿಯುತ್ತಿದ್ದರು. ಇಂದು ಇಡೀ ದೇಶವೇ ಸಮಾಜವಾದೀ ಸಮಾಜ ನಿರ್ಮಾಣದ ಬಗ್ಗೆ ತೀರ್ಮಾನಿಸಿದೆ. ಕಾರ್ಮಿಕ ವರ್ಗ ಇದರಿಂದ ಹೆಮ್ಮೆ ಪಡಬಹುದಾದ ವಿಷಯವಾಗಿದೆ.

ಆದರೆ ಇಂದು ಸಮಾಜವಾದದ ಬಗ್ಗೆ ಮಾತನಾಡುತ್ತಿರುವ ನಾಯಕರುಗಳು ತಮ್ಮದೇ ಆದ ವ್ಯಾಖ್ಯೆ ನೀಡುತಿದ್ದಾರೆ. ಸರ್ವೋದಯವೇ ಸಮಾಜವಾದ, ಸಹಕಾರ ಪದ್ಧತಿಯೇ ಸಮಾಜವಾದ, ಅಂಬರಚರಕವೇ ಸಮಾಜವಾದ ಎಂದೆಲ್ಲ ಹೇಳುತ್ತಾರೆ. ಆದರೆ ಅವರು ಅತಿಮುಖ್ಯವಾದ ಪ್ರಶ್ನೆಯ ಬಗ್ಗೆ—ಕಾರ್ಮಿಕವರ್ಗದ ಶೋಷಣೆ ಮತ್ತು ಲಾಭದ ಕೊಳ್ಳೆಯ ಬಗ್ಗೆ—ಮಾತ್ರ ಚಕಾರವೆತ್ತುವುದಿಲ್ಲ. ಸಮಾಜವಾದದ ಬಗ್ಗೆ ಅವರು ಕೊಡುತ್ತಿರುವ ವ್ಯಾಖ್ಯೆಯು ಕುರುಡರು ಕಂಡು ವಿವರಿಸಿದ ಆನೆಯಂತಿದೆ.

ಯಾವುದು ಪರಕೀಯ?

ಆದರೆ ನಮ್ಮ 'ಇಂಟಕ್' ಮಿತ್ರರು ಎ.ಐ.ಟಿ.ಯು.ಸಿ. ಮಾರ್ಕ್ಸ್‌ವಾದಿಯೆಂದೂ, ಸಮಾಜವಾದವು ಪರಕೀಯವಾದದ್ದೆಂದೂ ಹೇಳಿ ಅದರಿಂದ ಐಕ್ಯತೆ ಸಾಧ್ಯವಿಲ್ಲವೆಂದು ಹೇಳುತ್ತಾರೆ.

ನಾನು ಅವರನ್ನು ಬಂಡವಾಳವಾದ ನಮ್ಮ ದೇಶದ್ದೆ? ಮ್ಯಾನೇಜಿಂಗ್ ಏಜನ್ಸಿ ಪದ್ಧತಿ ನಮ್ಮ ದೇಶದ್ದೆ ಎಂದು ಕೇಳಬಯಸುತ್ತೇನೆ. ಅವರವಾದ ಒಪ್ಪಿದಲ್ಲಿ ಕಾರ್ಮಿಕವರ್ಗ ಭಾರತದ್ದು, ಬಂಡವಾಳಶಾಹಿ ಪರದೇಶದ್ದು ಎಂದಾಗುತ್ತದೆ.

ಮಾರ್ಕ್ಸ್‌ವಾದ ಪರಕೀಯವೆಂದು ಹೇಳುತ್ತಾರೆ. ಮಾರ್ಕ್ಸ್‌ರವರ ಎಲ್ಲ ಸಿದ್ಧಾಂತಗಳೂ, ಜರ್ಮನಿಗೆ ಸೇರಿದ್ದಲ್ಲ, ಅದು ಇಡೀ ಕಾರ್ಮಿಕವರ್ಗದ ಸಿದ್ಧಾಂತವಾಗಿದೆ. ಆದ್ದರಿಂದ ನನ್ನ ಮಿತ್ರರಾದ 'ಇಂಟಕ್'ನ ನಾಯಕ ವಾಸ್ವಾಡರವರು ತಾತ್ವಿಕ ವಿಷಯಗಳಲ್ಲಿ ಚೆಲ್ಲಾಟವಾಡುವುದು ಬೇಡ.

ಇನ್ನು ಕೆಲವು ಟ್ರೇಡ್ ಯೂನಿಯನ್ ನಾಯಕರುಗಳು ಇವೆಲ್ಲ ರಾಜಕೀಯ, ಕಾರ್ಮಿಕರ ನಡುವೆ ವಿವಿಧ ರಾಜಕೀಯ ಗುಂಪುಗಳಿವೆ. ಆದ್ದರಿಂದ ಐಕ್ಯತೆ ಹೇಗೆ ಸಾಧ್ಯ ಎಂದು ಹೇಳುತ್ತಾರೆ.

ಐಕ್ಯತೆಗೆ ಸಾಧ್ಯತೆ ಇದೆ

ಎಲ್ಲ ಪಕ್ಷಗಳು ಸಹ ಬಡತನ, ನಿರುದ್ಯೋಗಗಳನ್ನು ನಿರ್ಮೂಲಗೊಳಿಸಬೇಕೆಂದು, ಬ್ರಿಟಿಷ್ ಸಾಮ್ರಾಜ್ಯವಾದಿಗಳಿಂದ ಬಂದಿರುವ ಅವಶೇಷವನ್ನು ನಿರ್ಮೂಲಗೊಳಿಸಬೇಕೆಂದು ಒಪ್ಪಿಕೊಳ್ಳುತ್ತವೆ. ರಾಷ್ಟ್ರವು ಆರ್ಥಿಕವಾಗಿ, ಸಾಮಾಜಿಕವಾಗಿ ಎಲ್ಲ ರೀತಿಯಲ್ಲಿಯೂ ಅಭಿವೃದ್ಧಿಯಾಗಬೇಕೆಂದೂ, ಜೀವನ ಮಟ್ಟವು ಉತ್ತಮಗೊಳ್ಳಬೇಕೆಂದು ಒಪ್ಪುತ್ತವೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಸಾಮಾನ್ಯ ಒಪ್ಪಿಗೆ ಇದೆ. ದೇಶದ ಔದ್ಯೋಗಿಕರಣ, ಘನ ಕೈಗಾರಿಕೆಗಳನ್ನು ಪ್ರಭುತ್ವ ಕ್ಷೇತ್ರದಲ್ಲಿ ಆರಂಭಿಸುವುದು ಮೊದಲಾದ ಅಂಶಗಳನ್ನು ನಾವೂ ಸ್ವಾಗತಿಸಿದ್ದೇವೆ.

ಕಾರ್ಮಿಕವರ್ಗ ಸಮಾಜವಾದ, ಸರ್ವೋದಯ ಅಥವಾ ಯಾವುದೇ ತತ್ವ ಅವಲಂಬಿಸಿರಲಿ, ಎ. ಐ. ಟಿ. ಯು. ಸಿ. ಇಂಟಕ್ ಅಥವಾ ಯಾವುದೇ ಸಂಘಟನೆಗೆ ಸೇರಿರಲಿ ಮೇಲಿನ ಅಂಶಗಳಿಗೆ ಎಲ್ಲರೂ ಒಪ್ಪುತ್ತಾರೆ.

ಭಾರತದ ಶಾಂತಿ ನೀತಿಯ ಬಗ್ಗೆ ಸರ್ವಾನುಮತವಾದ ಅಭಿಪ್ರಾಯವಿದೆ. ನಮ್ಮ ಸ್ವಾತಂತ್ರ್ಯ ರಕ್ಷಣೆಯ ಮತ್ತು ಮುನ್ನಡೆಯ ದೃಷ್ಟಿಯಿಂದ ಶಾಂತಿ ನೀತಿಗೆ ಬೆಂಬಲ ಕೊಡುವುದಗತ್ಯವಾಗಿದೆ ಮಿಲಿಟರಿ ಕೂಟಗಳ ವಿರುದ್ಧ, ಅಲ್ಜೀರಿಯಾದಲ್ಲಿ ಸಾಮ್ರಾಜ್ಯವಾದಿಗಳ ದಬ್ಬಾಳಿಕೆ, ವಿರುದ್ಧ ಲೆಬನಾನ್ ಜೋರ್ಡಾನುಗಳಿಂದ ಅಮೇರಿಕ, ಬ್ರಿಟನ್ ಸೇನೆಗಳು ಹಿಂತಿರುಗಬೇಕೆಂದು ಹೋರಾಟ ನಡೆಸಬೇಕಿದೆ.

ನಮ್ಮ ಆರ್ಥಿಕವು ಮುನ್ನಡೆಯ ಬೇಕಿದ್ದಲ್ಲಿ ವ್ಯವಸಾಯ ಉತ್ಪನ್ನ ಹೆಚ್ಚಬೇಕಿದೆ. ಆದ್ದರಿಂದಾಗಿ ಔದ್ಯೋಗೀಕರಣದೊಂದಿಗೇ ಭೂಸುಧಾರಣೆಗಳು ನಡೆಯಬೇಕಿದೆ.

ಈ ಮೇಲಿನ ವಿಷಯಗಳ ಮೇಲೆ ಭಿನ್ನಾಭಿಪ್ರಾಯವಿರಲು ಸಾಧ್ಯವೇ? ಕಾರ್ಮಿಕ ವರ್ಗವು ಇಂಥ ಮುಖ್ಯವಾದ ಪ್ರಶ್ನೆಗಳ ಮೇಲೆ ವಿಭಜಿತವಾಗಿರುವುದು ಸಾಧ್ಯವೆ? ರಾಷ್ಟ್ರೀಯ ಪ್ರಶ್ನೆಗಳಾದ ಇವುಗಳಮೇಲೆ ಒಂದುಗೂಡುವ ಸಾಧ್ಯತೆ ಇಲ್ಲವೆ? ಇಂಟಕ್ ನಾಯಕರುಗಳು ಈ ಪ್ರಶ್ನೆಗಳ ಮೇಲೂ ಸಹ ಐಕ್ಯತೆಗೆ ಬಾರದಿರುವುದು ವಿಷಾದಕರವಾಗಿದೆ.

ಇಂದಿನ ಆರ್ಥಿಕ ಪರಿಸ್ಥಿತಿ ಮತ್ತು ಯೋಜನೆಯ ಮೂರನೆಯ ವರ್ಷದಲ್ಲಿ ತಲೆದೋರಿರುವ ಬಿಕ್ಕಟ್ಟು ಇವುಗಳನ್ನು ಕುರಿತು ವಿವರಿಸಿ, ಯೋಜನೆಯ ತಿರುಳನ್ನು ಕಾರ್ಯಗತವಾಗಿಸಲು ಐಕ್ಯತೆ ಅಗತ್ಯವಾಗಿದೆ ಎಂದು ತಿಳಿಸಿದರು.

ಇಂದಿನ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತು ಮಾತನಾಡುತ್ತ ಉತ್ಪಾದನೆ ಹೆಚ್ಚಿದ್ದರೂ ಸಹ ಕೆಲಸಗಾರರ ಕೂಲಿಯ ಮಟ್ಟ ಹೆಚ್ಚಿಲ್ಲ ಎಂದು ತಿಳಿಸಿದರು.

ಇರತಕ್ಕ ಕಾರ್ಮಿಕ ಶಾಸನಗಳೂ ಸಹ ಸರಿಯಾಗಿ ಜಾರಿಗೆ ತರಲ್ಪಡುತ್ತಿಲ್ಲ. ಇದಕ್ಕಾಗಿ ಕಾರ್ಮಿಕರು ಅನೇಕ ಹೋರಾಟಗಳನ್ನು ನಡೆಸಬೇಕಾಗಿದೆ. ಹೋರಾಟವಿಲ್ಲದೆ ಯಾವ ಕಾಯಿದೆಯೂ ಜಾರಿಗೆ ಬಂದಿಲ್ಲ ಎಂದು ತಿಳಿಸಿ ಹಲವು ನಿದರ್ಶನಗಳನ್ನಿತ್ತರು.

ಕಾರ್ಮಿಕರ ಐಕ್ಯತೆಯು ಕಾರ್ಯಾಚರಣೆಯಲ್ಲಿ ಬೆಳೆಯುತ್ತಿರುವುದನ್ನು ವಿವರಿಸಿದರು. ಅಂಚೆ ಮತ್ತು ತಂತಿ ನೌಕರರು ಮತ್ತು ಕೇಂದ್ರ ಸರಕಾರದ ನೌಕರರು ದ್ವಿತೀಯ ಪೇ ಕಮಿಶನ್ನಿಗಾಗಿ ಹೋರಾಟ ನಡೆಸಿದಾಗ ನಡೆದ ಐಕ್ಯ ಪ್ರದರ್ಶನ, ಮಾರ್ಚ್ 27ರಂದು ಕಾರ್ಮಿಕ ಬೇಡಿಕೆಗಳ ಪ್ರಣಾಳಿಕೆಯನ್ನು ಮಂಡಿಸಲು ನಡೆದ ಸೌಹಾರ್ದ ಪ್ರದರ್ಶನ, ಇತ್ತೀಚೆಗೆ ಮುಂಬಯಿಯಲ್ಲಿ ನಡೆದ ಸೌಹಾರ್ದ ಪ್ರದರ್ಶನ, ವಿಮಾನ ಕಾರ್ಖಾನೆ ನೌಕರರ ಹೋರಾಟಕ್ಕೆ ದೊರೆತ ಬೆಂಬಲ ಇತ್ಯಾದಿ ನಿದರ್ಶನಗಳನ್ನಿತ್ತರು.

ರಾಜಕೀಯ, ಸೈದ್ಧಾಂತಿಕ, ಸಾಂಸ್ಕೃಕ ಭಿನ್ನಾಭಿಪ್ರಾಯಗಳೇನೇ ಇರಲಿ, ಪ್ರಶ್ನೆಗಳ ಮೇಲೆ ಕಾರ್ಯಾಚರಣೆಗೆ ಐಕ್ಯತೆಗೆ ಯಾವ ಅಡ್ಡಿಯೂ ಇಲ್ಲವೆಂದೂ ಇತ್ತೀಚಿನ ಪ್ರದರ್ಶನಗಳು ತೋರಿಸಿಕೊಟ್ಟಿವೆ ಎಂದು ತಿಳಿಸಿದರು.

ಟ್ರೇಡ್ ಯೂನಿಯನ್ ಐಕ್ಯತೆ ಏರ್ಪಡಬೇಕಾಗಿದ್ದಲ್ಲಿ ಕಾರ್ಮಿಕ ಸಂಘಗಳು ಪ್ರಜಾಪ್ರಭುತ್ವ ರೀತಿಯಲ್ಲಿ ಕೆಲಸಮಾಡಬೇಕು. ಎಲ್ಲ ವಿಭಾಗ ಅಭಿಪ್ರಾಯಗಳನ್ನು ಹೊಂದಿರುವ ಕಾರ್ಮಿಕರ ಪ್ರತಿನಿಧಿಗಳು ಕಾರ್ಯಕಾರೀ ಸಮಿತಿಯಲ್ಲಿರಬೇಕು. ಪ್ರಜಾಪ್ರಭುತ್ವ ರೀತಿಯಲ್ಲಿ ಸತತವಾಗಿ ಚಟುವಟಿಕೆ ನಡೆಸಬೇಕು. ಎ.ಐ.ಟಿ.ಯು.ಸಿ. ಈ ಅಂಶವನ್ನು ಒತ್ತಾಯಪೂರ್ವಕವಾಗಿ ಹೇಳುತ್ತದೆ.

ಕಾರ್ಮಿಕ ವರ್ಗದ ಐಕ್ಯತೆಯು ಕೈಗಾರಿಕಾವಾರು, ಪ್ರಾದೇಶಿಕವಾರು ಮತ್ತು ಅಖಿಲ ಭಾರತ ರೀತ್ಯ ಏರ್ಪಡಬೇಕು. ಇದು ಟ್ರೇಡ್ ಯೂನಿಯನ್ ಚಳವಳಿಯ ಅತ್ಯಂತ ಮುಖ್ಯ ಪ್ರಶ್ನೆಯಾಗಿದೆ. ಯಾವ ಕೇಂದ್ರ ಸಂಘಟನೆಗೆ ಸೇರಬೇಕೆಂಬುದನ್ನು ಆಯಾ ಸಂಘಗಳೇ ತೀರ್ಮಾನಿಸಲಿ.

ಯಾವುದೇ ಕೇಂದ್ರ ಸಂಘಟನೆಗೆ ಸೇರಿರಲಿ ಪ್ರಾದೇಶಿಕವಾಗಿ ಟ್ರೇಡ್ ಯೂನಿಯನ್ ಕೌನ್ಸಿಲ್‌ಗಳು ಏರ್ಪಡಬೇಕೆಂದು ಎ.ಐ.ಟಿ.ಯು.ಸಿ. ಸೂಚಿಸುತ್ತದೆ. ಈ ಐಕ್ಯತಾ ಕೌನ್ಸಿಲುಗಳಿಂದ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಪಡೆದುಕೊಳ್ಳಲು ಶಕ್ತಿಯನ್ನು ಹೆಚ್ಚಿಸುತ್ತದೆ. ಬೆಂಗಳೂರಿನಲ್ಲಿ ಅಂಥ ಯತ್ನ ನಡೆಯುತ್ತಿದೆಯೆಂದು ನನಗೆ ತಿಳಿದುಬಂದಿದೆ. ಎ.ಐ.ಟಿ.ಯು.ಸಿ.ಯು ತನ್ನ ಪೂರ್ಣ ಬೆಂಬಲವೀಯುವುದೆಂದು ಭರವಸೆ ಕೊಡಬಯಸುತ್ತೇನೆ.

ತನ್ನ ಸ್ವಂತ ಹಿತಗಳನ್ನು ರಾಷ್ಟ್ರದ ಹಿತವನ್ನು ರಕ್ಷಿಸಲು ಟ್ರೇಡ್ ಯೂನಿಯನ್ ಚಳವಳಿಯ ಐಕ್ಯತೆಯಾಗಲಿ ಜೀವನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಮತ್ತು ದೇಶದ ಮುನ್ನಡೆಗಾಗಿ, ವಿಶ್ವಶಾಂತಿಗಾಗಿ ಸಮಾಜವಾದಕ್ಕಾಗಿ ಕಾರ್ಮಿಕವರ್ಗದ ನಡುವೆ ಐಕ್ಯತೆಯುಂಟಾಗಲಿ ಎಂದು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಬಿಜಾಪುರ ಜಿಲ್ಲೆಯ ಶ್ರೀ ಎನ್. ಕೆ. ಉಪಾಧ್ಯಾಯರವರು ವಂದನಾರ್ಪಣೆ ನಡೆಸಿದರು.

ರಾಜ್ಯದ ಆಡಳಿತ.......

[ಮೊದಲನೆ ಪುಟದಿಂದ]

ತನ್ನ ಕೈಕೆಳಗೆ ಕೆಲಸ ಮಾಡುತ್ತಿರುವ ಸರ್ಕಾರೀ ಕೆಲಸಗಾರರನ್ನು ವರ್ಗಾಯಿಸುವುದು, ಸಸ್ಪೆನ್ಶನ್‌ನಲ್ಲಿಡುವುದು, ವಿಚಾರಣೆಗೊಳಪಡಿಸುವುದು ಇವೆಲ್ಲ ಸರ್ಕಾರದ ಆಡಳಿತ ಕ್ರಮಗಳು. ತೊಂದರೆಗೊಳಗಾಗಿರುವ ಯಾವದೇ ಅಧಿಕಾರಿ ತನ್ನ ತೊಂದರೆ ನಿವಾರಣೆಗಾಗಿ ಅನುಸರಿಸಬೇಕಾದ ಸಾಮಾನ್ಯ ವಿಧಿ ಕ್ರಮಗಳು ಇದ್ದೇ ಇವೆ. ಈ ಕ್ರಮಗಳನ್ನು ಸಾರ್ವಜನಿಕವಾಗಿ ಚರ್ಚಿಸುವುದು ಸರಕಾರಕ್ಕಾಗಲಿ, ಸಂಬಂಧಿಸಿದ ಅಧಿಕಾರಿಗಳಿಗಾಗಲಿ ಒಳ್ಳೇದಲ್ಲ. ಶ್ರೀ ಸಾದಿಕ್ ಅಲಿಯವರು ತಮ್ಮ ಪಕ್ಷವು ಆಳುತ್ತಿರುವ 13 ರಾಜ್ಯಗಳ ಮುಖ್ಯ ಮಂತ್ರಿಗಳೆಲ್ಲ ತಮ್ಮ ಆಡಳಿತದಲ್ಲಿಯ ಆಗುಹೋಗುಗಳನ್ನು ಸಾರ್ವತ್ರಿಕವಾಗಿ ಚರ್ಚಿಸಿ ಅವು ನ್ಯಾಯವಾದುವೆಂದು ಹೇಳಲು ಸಿದ್ಧರಿರುವರೆ ಎಂದು ನಾನು ತಿಳಿಯಲಿಚ್ಛಿಸುತ್ತೇನೆ. ರಾಜ್ಯ ಸರಕಾರದ ಆಡಳಿತ ಕ್ರಮಗಳನ್ನು ಕುರಿತು ಶ್ರೀ ಸಾದಿಕ್ ಅಲಿಯವರು ಮಾಡಿದ ಪ್ರಸ್ತಾಪಗಳೇನೂ ತೀರಾ ಹೊಸವೇನಲ್ಲ. ಕೇರಳದಲ್ಲಿ ಕಾಂಗ್ರೆಸ್ ನಾಯಕರುಗಳೂ ಕೂಡ ಕೆಲವು ಸಾರ್ವಜನಿಕ ಹೇಳಿಕೆಗಳನ್ನು ಕೊಟ್ಟು ಅಧಿಕಾರಿಗಳು ಸರ್ಕಾರದ ಕ್ರಮಗಳ ಬಗ್ಗೆ ಅತೃಪ್ತರಾಗಿದ್ದರೆ ಅಂಥವರು ಕಾಂಗ್ರೆಸ್ ನಾಯಕರನ್ನು ನಂಬಬಹುದೆಂಬ ಪ್ರಭಾವ ಬೀರಲೆತ್ನಿಸಿದ್ದಾರೆ. ಉದಾಹರಣೆಗೆ ಪಾಸಂಪಿಳ್ಳಿ ಗೋವಿಂದ ಮೆನನ್‌ರವರು ಒಮ್ಮೆ ಸಾರ್ವಜನಿಕವಾಗಿಯೆ "ಸರಕಾರಿ ಅಧಿಕಾರಿಗಳು ತಮ್ಮ ವಿವೇಕ ಏನು ಹೇಳುತ್ತದೆಯೋ ತಮಗೇನು ಸರಿಯೆನಿಸುತ್ತದೆಯೋ ಅದರಂತೆ, ಅದು ಸರಕಾರದ ಆಡಳಿತ ಕ್ರಮ, ನೀತಿ, ನಿಯಮಗಳಿಗೆ ವಿರುದ್ಧವಾಗಿದ್ದರೂ ನಡೆದುಕೊಳ್ಳಬೇಕು" ಎಂದು ಹೇಳಿದರು.

ಕಾಂಗ್ರೆಸ್ಸೇ ರಕ್ಷಕ !

ರಾಜ್ಯದ ಆಡಳಿತ ವ್ಯವಹಾರ ಹಾಗೂ ಕ್ರಮಗಳಲ್ಲಿ ಈ ಸರಕಾರವೇ ಕೊನೆಯದಲ್ಲ, ಕೇಂದ್ರ ಸರಕಾರದ ಅಧಿಕಾರದಲ್ಲಿರುವ ಕಾಂಗ್ರೆಸ್ಸಿನಲ್ಲಿಯೇ ನಿಜವಾಗಿ ಇವರ ಹಿತರಕ್ಷಣೆ ಇರುವುದು ಎಂಬುದನ್ನು ಸರಕಾರಿ ನೌಕರರ ಮೇಲೆ ಬಿಂಬಿಸುವುದೇ ಸಾದಿಕ್ ಅಲಿಯವರಿಗೂ ಕೇರಳ ಕಾಂಗ್ರೆಸ್ಸಿಗರಿಗೂ ಬೇಕಾಗಿದೆ ಎಂಬುದು ಇದರಿಂದ ಗೋಚರಿಸುತ್ತದೆ.

"ಕಾಂಗ್ರೆಸ್ಸಿಗರಲ್ಲಿ ತೋರಿರುವ ಈ ಪ್ರವೃತ್ತಿಯನ್ನು ಸಕಾಲದಲ್ಲಿ ತಡೆಹಿಡಿಯದಿದ್ದರೆ ಪಕ್ಷ ರಾಜಕಾರಣವನ್ನು ಸರಕಾರದ ಆಡಳಿತಕ್ಕೂ ಅಮದು ಮಾಡಿಕೊಂಡಂತಾಗುತ್ತದೆಯೆಂಬುದನ್ನು ಭಾರತದ ಪ್ರಧಾನ ಮಂತ್ರಿ, ಕೇಂದ್ರ ಸರ್ಕಾರದ ಇನ್ನಿತರ ಪ್ರಮುಖರು ಮತ್ತು ಕಾಂಗ್ರೆಸ್ ಹೈಕಮಾಂಡ್ ಇವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಅಂತೆಯೇ ಅವರು ಈ ಪ್ರವೃತ್ತಿಯನ್ನು ಬಹಿರಂಗವಾಗಿ ಖಂಡಿಸಲಿ, ವರ್ಜಿಸಲಿ, ಆಯಾ ಪ್ರಾಂತ್ಯಗಳಲ್ಲಿ ತನ್ನ ಆಡಳಿತ ವರ್ಗದ ಮೇಲೆ ಶಿಸ್ತು ಪಾಲನೆಗಾಗಿ ಕ್ರಮಗಳನ್ನು ಕೈಕೊಳ್ಳುವುದು ಆಯಾ ಸರಕಾರದ ರಾಜ್ಯಾಂಗ ಬದ್ಧ ಹಾಗೂ ಕಾನೂನು ಬದ್ಧ ಹಕ್ಕಾಗಿದೆಯೆ ವಿನಃ ಅಖಿಲ ಭಾರತೀಯ ಅಥವಾ ಪ್ರಾಂತೀಯವಾದ ಯಾವ ಪಕ್ಷವೂ ಹಸ್ತಕ್ಷೇಪ ಮಾಡಬೇಕಾಗಿಲ್ಲ."

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone 3810